ಧರ್ಮಸೇವೆಗಾಗಿ

Shankarnarayana ~~Bhat~~,
ಅಷ್ಟಮಂಗಲ Vidwan,
Kurnad.

~~ಕ.ಪ. 169~~ 170

358

ಕರ್ಣಾಟಕ ಹಿತೈಷಿಣೀ ಗ್ರಂಥಮಾಲೆಯ

ಏಳನೆಯ ಪುಷ್ಪವು.

ಕರ್ಣಾಟಕ

ಕವಿತಾ ಕುಸುಮ ಮಂಜರಿ.

ದ್ವಿತೀಯ ಗುಚ್ಛ.

ಇದನ್ನು

ಕರ್ಣಾಟಕ ಹಿತೈಷಿಣೀ ಗ್ರಂಥಮಾಲೆಯ ಸಂಪಾದಕರಾದ

ನಾರಾಯಣ ವೆಂಕಟೇಶ ಕುರಡಿ

ಇವರು ರಚಿಸಿದರು.

ಶ್ರೀಮಹಾವೀರ ಪ್ರಿಂಟಿಂಗ ವರ್ಕ್ಸ ಬೆಳಗಾವಿ.

ಸನ್ ೧೯೨೨.

Price 0-5-0. **ಬೆಲೆ ೫ ಆಣೆ.**

ಕಾಯಂ ವರ್ಗಣೀದಾರರಿಗೆ ೪ ಆಣೆ; ಅಂಚೆಯ ವೆಚ್ಚ ಬೇರೆ.

ಪೀಠಿಕೆ.

ಪ್ರಥಮಗುಚ್ಛದ ಪೀಠಿಕೆಯೊಳಗಿನ ಅವತರಣವು:—“ ಇಷ್ಟು ಭಾಗಗಳನ್ನು ಒಳಕೊಂಡ ಈ ಖಂಡಕಾವ್ಯದಲ್ಲಿ ಹೊಸ ಹೊಸ ತರದ ಭಾವನೆಗಳೂ ವರ್ಣನಾಪ್ರಕಾರಗಳೂ ಮನೋಹರವಾಗಿಯೂ ಅಷ್ಟೇ ವಿಚಾರಕ್ಷಮವಾಗಿಯೂ ಇರುವವು. ಕಳೆದ ಎಷ್ಟೋ ವರ್ಷಗಳಿಂದ ಶ್ರೀಯುತ ಕುರಡಿಯುವರು ಸರ್, ರವೀಂದ್ರನಾಥರವರ ಗೀತಾಂಜಲಿ ಮುಂತಾದ ಉತ್ಕೃಷ್ಟ ಕಾವ್ಯಗಳನ್ನು ಓದಿ, ಅವುಗಳ ಭಾಗಗಳನ್ನು ಪದ್ಯರೂಪದಲ್ಲಿ ಬರೆದು ಮಾಸಪತ್ರಿಕೆಗಳ ದ್ವಾರದಿಂದ ಕರ್ನಾಟಕದ ಸಹೃದಯರಾದ ವಾಚಕರ ಮುಂದೆ ಇಟ್ಟಿರುವರು. ಸರ್, ರವೀಂದ್ರನಾಥ ಠಾಕೂರರವರ ಉದಾತ್ತವಿಚಾರಗಳ ವಾಚನದಿಂದುಂಟಾದ ಸ್ಫೂರ್ತಿಯಿಂದ ಬರೆದ ಈ ಖಂಡಕಾವ್ಯದಲ್ಲಿ ಎಷ್ಟೋ ಉದಾತ್ತವಿಚಾರಗಳು ಪ್ರತಿಯೊಂದು ಭಾಗದಲ್ಲಿಯೂ ಗೋಚರವಾಗುವವು. ಆದರೆ ಶ್ರೀ. ಕುರಡಿಯುವರ ಉದ್ದೇಶವು ತಾನೊಬ್ಬ ಉದ್ದಾಮ ಕವಿಯೆಂದೂ ಮಹಾಕವಿಗಳ ಕೂಡ ಸ್ಪರ್ಧೆಮಾಡುವೆನೆಂದೂ ಹೆಮ್ಮೆ ತೋರಿಸುವದು ಇರದೆ, ಸುಲಭವಾದ ಭಾಷೆಯಿಂದಲೂ ಸರಸವಾದ ಶೈಲಿಯಿಂದಲೂ ಗ್ರಂಥವನ್ನು ರಚಿಸಿ ಚಿಕ್ಕಮಕ್ಕಳ ನೀತಿಯನ್ನು ಸುಧಾರಿಸುವದು ಇರುವದರಿಂದ, ತಕ್ಕ ವಿಷಯುಗಳನ್ನು ಆರಿಸಿ ಪ್ರಾಚೀನರ ಕಠಿಣವಾದ ಮಾರ್ಗವನ್ನು ಹಿಡಿಯದೆ ಮಧ್ಯಕಾಲದ ಮಧ್ಯಸ್ಥಭಾಷೆಗಿಂತ ಬಹುಮಟ್ಟಿಗೆ ಭಿನ್ನವಾಗಿಯೂ ಪ್ರಚಲಿತಭಾಷೆಗೆ ಇನ್ನಿಷ್ಟು ಹೋಲುವಂತೆಯೂ ಇರುವ ಭಾಷೆಯನ್ನು ಉಪಯೋಗಿಸಿ ಈ ಚಿಕ್ಕ ಖಂಡಕಾವ್ಯವನ್ನು ರಚಿಸಿರುವರು. ಗ್ರಂಥವು ಚಿಕ್ಕದೆಂದು ಉಪೇಕ್ಷಿಸದೆ ಪಾಠಕರು ಒಮ್ಮೆಯಾದರೂ ಮನಮುಟ್ಟಿ ಈ ಕಾವ್ಯವನ್ನು ಓದಿದ್ದಾದರೆ ಅವರಿಗೆ ಕಾವ್ಯಪಠನದಿಂದಾಗುವ ಅನೇಕ ಪ್ರಯೋಜನಗಳು ನಿಃಸಂದೇಹವಾಗಿ ಆಗುವವೆಂದು ತುಂಬಾ ಭಾವಿಸುವೆವು. ”

ಆರ್ಯರೆ, ಪ್ರಸ್ತುತಗುಚ್ಛದ ಮೊದಲನೆಯ ಭಾಗದಲ್ಲಿ ಕರ್ನಾಟಕದೊಳಗಿನ ಎಲ್ಲ ವಿಭೂತಿಗಳ ನಾಮಸ್ಮರಣಕ್ಕೆ ಅನುಕೂಲವಾಗುವಂತೆಯೂ ಆ ಮಹಾಪುರುಷರ ಉಜ್ವಲತೆಯನ್ನು ಸಾರುವ ಐತಿಹಾಸಿಕ ಭಾವನೆಯಿಂದ ಉಜ್ವಲವಾದ ಅಭಿಮಾನವು ಮನಸ್ಸಿನಲ್ಲಿ ಬರುವಂತೆಯೂ ಮಾತೃಭೂಮಿ-ಸ್ತವನರೂಪವಾದ ಮಂಗಲಾಚರಣೆಯಿರುವದು. ಎರಡನೆಯ ಭಾಗದಲ್ಲಿ ಕರ್ನಾಟಕದಲ್ಲಿ ಅಗಿಹೋದ ಎಲ್ಲ ಮಹಾಕವಿಗಳ ಸ್ಮರಣೆಯೂ ಅವರ ಸ್ಥಳ-ಕಾಲ-ಕುಲಗಳೂ ಅವರ ಮಹಾಕಾವ್ಯಗಳೂ ಒಂದೆಡೆಯಲ್ಲಿ ಕ್ರಮದಿಂದ ಸಂಗ್ರಹಿಸಲ್ಪಟ್ಟಿವೆ. ೩, ೧೨ನೇ ಭಾಗಗಳೂ ಸ್ವದೇಶಪ್ರೇಮವನ್ನು ಹುಟ್ಟಿಸಿ ಸದ್ಯದ ಕನ್ನಡಿಗರ ಕರ್ತವ್ಯ ವಿಚಾರಗಳನ್ನು ಸೂಚಿಸುವಂತಿವೆ.

೪, ೯ನೇ ಭಾಗಗಳಲ್ಲಿರುವ ವಿಚಾರಗಳನ್ನು ಪರ್ಶಿಯಾದ ಮಹಾಕವಿ ಶೇಕ ಸಾದಿಯ ‘ ಗುಲಿಸ್ತಾನ ’ವೆಂಬ ಕಾವ್ಯದೊಳಗಿಂದ ಆರಿಸಿಕೊಂಡಿರುತ್ತೇನೆ. ೫, ೬, ೭, ೧೦ ಈ ಭಾಗಗಳಲ್ಲಿರುವ ವಿಚಾರಗಳನ್ನು ಡಾ. ರವೀಂದ್ರನಾಥ ಠಾಕೂರರವರ ವಂಗೀಯ ಕಾವ್ಯದಿಂದ ಆಯ್ದುಕೊಂಡಿರುವೆನು. ಈ ನನ್ನ ಅಲ್ಪಕೃತಿಯ ಹಸ್ತಲಿಖಿತ ಪ್ರತಿಯನ್ನು ಸಾದ್ಯಂತವಾಗಿ ಓದಿನೋಡಿ ಅಡಿಗಡಿಗೆ ಕಂಡುಬಂದ ತಪ್ಪು ತಡೆಗಳನ್ನು ತೋರಿಸಿ ಎಲ್ಲ ಪ್ರಾಂತಗಳ ಕನ್ನಡಿಗರಿಗೂ ಒಪ್ಪಿಗೆಯಾಗುವಂತಹ ಹಲವು ಪದಪರ್ಯಾಯಗಳನ್ನು ಸೂಚಿಸಿದ ಶ್ರೀಮತ್ಪರಮಪೂಜ್ಯ ಎಚ್. ಚೆನ್ನಕೇಶವ ಅಯ್ಯಂಗಾರರವರ ಉಪಕಾರವನ್ನು ಸದಾಸ್ಮರಿಸುವೆನು.

ಶ್ರೀಸರಸ್ವತೀಮಂದಿರಮ್,
ಧಾರವಾಡ. ಎಪ್ರಿಲ್ ೧೯೨೨.

ಸದಾ ಸುಜನ ಪಾದಾವನತ,
ನಾರಾಯಣ.

ॐ

THIS LITTLE WORK

is

very respectfully dedicated

TO

PADMANABHARAO CHANDAVARKAR ESQ.,

B. A.

Educational Inspector, S. D.

BY

his most obedient student

THE POET.

(with his kind permission.)

ಕರ್ಣಾಟಕ ದೇಶಮಾತೆ.

"ಆರುಹಿತವರು ನಿನಗೆ ಈ ಮೂವರೊಳಗೆ–" ಎಂಬಂತೆ.

ಭೋಮಾತೆ ಕರ್ಣಾಟ ಭೂಮಾತೆ ವಿನುತೆ ।
ಆ ಮಹಾ ಋಷಿನೆಮಿಃತೆ ನಮಿಸುವೆನು ಪೊರೆಯೌ ॥ ಪಲ್ಲ ॥

ಕಾವೇರಿ ದಕ್ಷಿಣದೊಳುತ್ತರದ ದಿಶೆಗೆಗೋ ।
ದಾವರಿಯೆ ನಿನ್ನ ಗಡಿಯೆನಿಸಿತೊಮ್ಮೆ ॥
ಭೋ ವಸುಂಧರೆ ಪೂರ್ವದಾ ನಿನ್ನ ವೈಭವವ ।
ನಾವ ಕವಿ ಬಣ್ಣಿಸಲು ಸಾಧ್ಯವಮ್ಮಾ! ॥ ೧ ॥ ಭೋಮಾತೆ—

ಹಳೆಬೀಡು ಬಾದಾಮಿ ಬನವಾಸಿ ವಿಜಯಪುರ ।
ಮಳಖೇಡ ಕಲ್ಯಾಣ—ನಗರಗಳಲಿ ॥
ಕಲಿಸಾರ್ವಭೌಮ ನೃಪರಿಂದೆಸೆದು ಹೆಸರಾದ ।
ಹಳೆಯ ರಾಜ್ಯಗಳಿಂದೆ ಮೆರೆದೆಯಮ್ಮಾ! ॥ ೨ ॥ ಭೋಮಾತೆ—

ಚಾಲುಕ್ಯ ೧ ಪುಲಿಕೇಶಿ ೨ ಗೋವಿಂದ ೩ ನೃಪತುಂಗ ।
೪ ತೈಲನೃಪ ೫ ವಿಕ್ರಮಾದಿತ್ಯ ೬ ಬುಕ್ಕ ॥
ಮೇಲಾದ ಕಲಿ ೭ ಕೃಷ್ಣರಾಯರೆಂಬಾ ಸತ್ವ ।
ಶಾಲಿ ನೃಪವರರಿಂಗೆ ಜನ್ಮದಾತೆ ॥ ೩ ॥ ಭೋಮಾತೆ—

೮ ಅಕ್ಕದೇವಿಗೆ ವೀರ ೯ ಮೈರಾಳದೇವಿಗೆ ।
೧೦ ಬುಕ್ಕರಾಯನ ಸೊಸೆಗೆ ೧೧ ವಿದುಷಿಯರಿಗೆ ॥
ಲೆಕ್ಕವಿಲ್ಲದ ಭವ್ಯಗುಡಿಗಳನು ವಿರಚಿಸಿದ ।
ಜಕ್ಕಣಾಚಾರ್ಯನಿಗೆ ಜನ್ಮದಾತೆ ॥ ೪ ॥ ಭೋಮಾತೆ—

ಅದ್ವೈತ ಮತವಾದಿ ಕೇರಳದ ಶಂಕರನ ।
ಸುದ್ವೈತ ಮತವಾದಿ ಮಧ್ವಮುನಿಯ— ॥
ಸುದ್ವಿಜನ ರಾಮಾನುಜನ ಕಾರ್ಯದಭಿಮಾನಿ ।
ಸದ್ವಿಬುಧ ೧೨ ಭಾಸ್ಕರನ ಜನ್ಮದಾತೇ ॥ ೫ ॥ ಭೋಮಾತೆ—

ಬಿಜ್ಜೆಯಲಿ ಹೆಸರಾದ ಮಾಧವನ ಸಾಯನನ ।
ಬಿಜ್ಜಳನ ಕಾಲದಾ ಬಸವೇಶನ ॥
ಸಜ್ಜನ ಪುರಂದರನ ಕನಕದಾಸನ ಜನನಿ ।
ಮಜ್ಜನಕ ಜನನಿಯರ ಜನ್ಮದಾತೆ ॥ ೬ ॥ ಭೋಮಾತೆ—

---

(೧) ಬಾದಾಮಿಯ ಚಾಲುಕ್ಯಮನೆತನದ ಶ್ರೀಸತ್ಯಾಶ್ರಯ ಪುಲಿಕೇಶಿ ಮಹಾರಾಜನು (೭ನೆಯ ಶತಕ).
(೨) ಮಳಖೇಡದ ರಾಷ್ಟ್ರಕೂಟ ಚಕ್ರವರ್ತಿಯಾದ ಮೂರನೇ ಗೋವಿಂದನು (೯ನೆಯ ಶತಕ).
(೩) ಕವಿಶ್ರೇಷ್ಠನೂ ಕರ್ಣಾಟಕಕ್ಕೆ ಅಲಂಕಾರ ಸ್ವರೂಪನೂ ಆದ ರಾಷ್ಟ್ರಕೂಟ ಮಹಾರಾಜನು (೯ನೆಯ ಶತಕ).
(೪) ಕಲ್ಯಾಣದ ಚಾಲುಕ್ಯ ಮನೆತನದ ಮೂಲಪುರುಷನು (೧೦ನೆಯ ಶತಕ).
(೫) ಕಲ್ಯಾಣ ನಗರವನ್ನು ಸ್ಥಾಪಿಸಿದ ಸೋಮೇಶ್ವರ ಮಹಾರಾಜನ ಎರಡನೆಯ ಮಗನಾದ ನೃಪೋತ್ತಮನು (೧೧ನೆಯ ಶತಕ).
(೬) ವಿಜಯನಗರದ ರಾಜಮನೆತನದಲ್ಲಿ ಪ್ರಬಲನಾಗಿ ಕೋಟೆಕೊತ್ತಳಗಳನ್ನು ಕಟ್ಟಿಸಿದ ಮೊದಲನೆಯ ರಾಜನು (೧೪ನೆಯ ಶತಕ).
(೭) ವಿಜಯನಗರದ 'ನರಸ' ಮನೆತನದ ಪ್ರತಾಪಶಾಲಿಯಾದ ಕೃಷ್ಣದೇವರಾಜ ಮಹಾರಾಜನು (೧೬ನೆಯ ಶತಕ).
(೮) ೩ನೆಯ ಜಯಸಿಂಹನ ತಂಗಿಯಾದ "ರಣಭೈರವಿ"ಯೆಂದು ಹೆಸರು ಪಡೆದ ಮಹಾಮಹಿಮಳು.
(೯) ಬನವಾಸಿಯಲ್ಲಿ "ಪಿರಿಯರಸಿ"ಯೆಂದು ಹೆಸರು ಪಡೆದು ಆಳಿದ ಚಾಲುಕ್ಯಮನೆತನದ ರಾಣಿ.
(೧೦) ವೀರಕಂಪಣರಾಯ ಚರಿತವೆಂಬ ಸಂಸ್ಕೃತ ಕಾವ್ಯಕರ್ತ್ರಿ ಗಂಗಾದೇವಿ.
(೧೧) ಕಂತಿ, ಹೊನ್ನಮ್ಮ, ನೀಲಮ್ಮ, ಗಿರಿಯಮ್ಮ, ಮೊದಲಾದ ವಿದುಷಿಯರು.
(೧೨) ಜ್ಯೋತಿಷ-ಗಣಿತಶಾಸ್ತ್ರಗಳಲ್ಲಿ ಅದ್ವಿತೀಯಪಂಡಿತ ಶ್ರೀಭಾಸ್ಕರಾಚಾರ್ಯನು.

ಕರ್ಣಾಟಕ ಕವಿಮಂಡಲ.

ಕರ್ಣಾಟಸಾಹಿತ್ಯಸಾಗರದ ಮೇರೆಯಂ ।
ಕಣ್ಣಾರೆ ಕಾಣಲಾರೆವು ನಮಗೆ ತಿಳಿದಿರುವ ।
ಕರ್ಣಾಟ ಕವಿಕುಲೋತ್ತಂಸರಂ ಕ್ರಮದಿಂದೆ ಭಕ್ತಿಯಿಂ ವಂದಿಸುವೆನು ॥
ಕರ್ಣಾಟ ಕಾವ್ಯಂಗಳಲ್ಲೆಮಗೆ ದೊರೆತಿರುವ ।
ಕರ್ಣಾಟ **ಕವಿರಾಜಮಾರ್ಗ**ವೇ ಮೊದಲೆನಿಸಿ ।
ಕರ್ಣಾಟ ಕವಿರಾಜ **ನೃಪತುಂಗ** ಭೂಪಾನುಮತಮಾಯ್ತು ನಮಿಪೆನವನ ॥೧॥

ಲಲಿತವಹ ಪುಲಿಗೆರೆಯ ತಿರುಳ ಕನ್ನಡದಲ್ಲಿ ।
ಅಲಸದೆಯೆ **ಭಾರತಾದಿಪುರಾಣ**ಗಳನು ಜನ ।
ರೊಲಿದು ತಲೆದೂಗುವಂದದಿ ಬರೆದ ಕವಿ**ಯಾದಿಪಂಪ**ನಂ ವಂದಿಸುವೆನು ॥
ಲಲಿತ **ಶಾಂತಿಪುರಾಣ** ವರ **ಜಿನಾಕ್ಷರಮಾಲೆ** ।
ಗಳರಚಿಸಿ **ಭುವನೈಕರಾಮಾಭ್ಯುದಯ**ವ ಬುಧ- ।
ರೊಲಿಯಲುಸಿರಿದ ಉಭಯ ಕವಿಚಕ್ರವರ್ತಿಯಂ **ಪೊನ್ನ**ನಂ ವಂದಿಸುವೆನು ॥೨॥

ಸಸ್ಕೃತ **ಗದಾಯುದ್ಧವನಜಿತಪುರಾಣ**ವನು ।
ಕನ್ನಡದಿ ಬರೆದಿರುವ ಮುದುವೊಳಲ ಬಳೆಗಾರ ।
ರನ್ನನಂ ವಂದಿಸುವೆನೊಂಬತ್ತುವರೆ ನೂರರಾದಿಯಲಿ (೯೪೯) ಜನ್ಮಿಸಿರುವ ॥
ಕನ್ನಡದ ಕವಿಗಳಲಿ ರನ್ನದಂತೆಸೆಯುವರು ।
ರನ್ನಪೊನ್ನರು ವೆಂಗಿಪಳುವಿನಾದಿಯುಪಂಪ ।
ನುನ್ನತ ಸುಕೀರ್ತಿ ಪಂಪಂ ಪಿರಿಯನುಳಿದರ್ಗೆಯರ್ಧಶತಮಾನದಿಂದ ॥ ೩ ॥

ಕನ್ನಡದೆ **ಕಾದಂಬರಿ**ಯ ಬರೆದ ಕಬ್ಬಿಗನ ।
ಕನ್ನಡದ **ಛಂದೋಂಬುಧಿ**ಯ ಬರೆದ ಜಗವೆಲ್ಲ ।
ಮನ್ನಿಸುವ ಮೊದಲನೆಯ ವೆಂಗಿಪಳುವಿನ **ನಾಗವರ್ಮ**ನಂ ವಂದಿಸುವೆನು ॥

ನ್ನ ಹೆಸರಿನ **ಪುರಾಣ**ಮಂ ಗದ್ಯದೊಳ್ ಬರೆದು ।
ನ್ನಡದ ಹತ್ತನೆಯ ಶತಮಾನದಂದಮುಂ ।
ನ್ನಗನ್ನಡಿಯಂತೆ ಬಿಂಬಿಸಿದ **ಚಾವುಂಡರಾಯ**ನಂ ವಂದಿಸುವೆನು ॥ ೪ ॥

ಪಂಪಾದ ಶೈಲಿಯಲಿ **ಪಂಪರಾಮಾಯಣ**ವ ।
ಒಂಪಾದ **ಮಲ್ಲಿನಾಥಪುರಾಣ**ಮಂ ಬರೆದ ।
ಪಂಪನೆಂಬುಪನಾಮಮಂ ತಳೆದ ವಿಜಯಪುರವಾಸಿಯಂ ವಂದಿಸುವೆನು ॥
ಂಪನೃಪತುಂಗರುಂ ರನ್ನನುಂ ಪೊನ್ನನವ ।
ಂಪರುಂ ಕವಿನಾಗವರ್ಮನುಂ ಜೈನರ್ಕೈ ।
ಂಪು ಸೊಂಪೆನಿಸೆ ಸುಸ್ಥಿತಿಯ ಕನ್ನಡಕಿತ್ತ ಕವಿಕುಲೋತ್ತಂಸರಿವರ್ಕೈ ॥ ೫ ॥

ಕನ್ನಡದೆ ಗಣಿತಶಾಸ್ತ್ರವ ಸಕಲಪಂಡಿತರು ।
ನ್ನಿಪಂತೊರೆದ **ರಾಜಾದಿತ್ಯ** ಕವಿವರಂ ।
ನ್ನೆರಡುನೂರರಿಪ್ಪತ್ತರೊಳ್ ಕೊಂಡಿಮಂಡಲದೊಳಗೆ ಬಾಳ್ದನಲ್ತೇ ॥
ನ್ನುತಂ **ನಯಸೇನ**ನೊರೆದು **ಧರ್ಮಾಮೃತ**ವ ।
ನ್ನೆರಡುನೂರ ಹನ್ನೆರಡರಲಿ ಬಾಳಿದಂ ।
ನ್ನಡದ ನಡುನಾಡ ಮುಳಗುಂದದಲಿ ನಮಿಪೆನೀ ಜೈನಕವಿಗಳನ್ನು ॥ ೬ ॥

ಪುರಸವಹ ಜೈನಶೈಲಿಯು **ಪಂಚತಂತ್ರ**ಮಂ ।
ರೆದು ಜೈನರ ಕಾಲದಲಿ ಹೆಸರುಗೊಂಡಿರುವ ।
ರ ಸಯ್ಯಡಿಯ ವಾಸಿಯಂ ದ್ವಿಜಕುಲದ **ದುರ್ಗಸಿಂಹ**ನಂ ವಂದಿಸುವೆನು ॥
ರಸ ಲಕ್ಷಣಶಾಸ್ತ್ರ **ಕಾವ್ಯಾವಲೋಕನ**ವ ।
ರಶಬ್ದಶಾಸ್ತ್ರ **ಭಾಷಾಭೂಷಣ**ವ ಬರೆದ ।
ರಡನೆಯ **ನಾಗವರ್ಮ**ನಂ **ವಸ್ತುಕೋಶ**ದ ಕರ್ತನಂ ವಂದಿಸುವೆನು ॥ ೭॥

ವೀರಶೈವಮತಪ್ರಸಾರಕರ ಮುಂದಾಳು ।
ೀರಬಿಜ್ಜಳರಾಜನಾಶ್ರಯದ **ಬಸವ**ಗುರು ।
ೀರಶೈವಮತಪ್ರಸಾರಕ ಸುವಚನರಚನಾಚತುರನೆನಿಸಿ ಮೆರೆದು ॥
ೂರು ವಚನಗಳ ರಚಿಸಲು **ಚೆನ್ನಬಸವ**ಗುರು ।
ರು ವಚನಗಳನ್ನು ರಚಿಸಿದನು ಹನ್ನೊಂದು ।
ೂರರರುವತ್ತರಲಿ ಬಾಳಿದಾ ಕಲ್ಯಾಣವಾಸಿಗಳ ವಂದಿಸುವೆನು ॥ ೮ ॥

ಹರಿಹರಂ **ಶಿವಗಣದ ರಗಳೆ ಪಂಪಾಶತಕ** ।
ಸರಸ **ಗಿರಿಜಾಕಲ್ಯಾಣ** ಕಾವ್ಯಗಳ ಬರೆದು, ।
ವರ ವೀರಶೈವಕವಿ, ಜಾಮಾತ **ರಾಘವಾಂಕಂ** ತನ್ನ ಶಿಷ್ಯನೆನಿಸಿ ॥
ನರಚರಿತೆ ವರ**ಹರಿಶ್ಚಂದ್ರ** ಕಾವ್ಯವನೊರೆಯು ।
ಲುರೆಜರೆದು ಹಂಪೆಯೊಳ್ **ಸಿದ್ಧರಾಮಪುರಾಣ** ।
ವರಕಾವ್ಯ **ಸೋಮನಾಥಚರಿತ್ರೆ**ಗಳ ಬರೆಸಿದಂ ನಯದೆ ನಮಿಪೆನವರ ॥ ೯

ಹನ್ನೊಂದುನೂರೈದು (೧೧೦೫) ನಾಗಚಂದ್ರನಕಾಲ ।
ಹನ್ನೊಂದುನೂರನಾಲ್ವತ್ತೈದು (೧೧೪೫) ದುರ್ಗನದು ।
ಹನ್ನೊಂದುನೂರಕಿನ್ನೂರ್ ಕಡಿಮೆಗಿನ್ನುಮೆಪ್ಪತ್ತೆಂಟು ಕೂಡಿಸಿದರೆ ॥
ಹನ್ನೆರಡು ಮತ್ತೆ ಕೂಡಲ್ ಕ್ರಮದೆ ಬರುತಿಹುದು (೯೭೮; ೯೯೦) ।
ಸನ್ನುತರ ಚಾವುಂಡನಾಗವರ್ಮರಕಾಲ ।
ಹನ್ನೊಂದುನೂರಕರುವತ್ತುಮೇಲೈದಾಗೆ (೧೧೬೫) ರಾಘವಾಂಕನಕಾಲವು ॥

ಶ್ರೀಮಹಾಶೃಂಗಾರ ಕಾವ್ಯ **ಲೀಲಾವತಿ**ಯು ।
ನೇಮಿನಾಥಪುರಾಣವನು ರಚಿಸಿ ಹೆಸರಾದ ।
ನೇಮಿಚಂದ್ರಂಗೆರಗುವೆನು ಮೊತ್ತಮೊದಲು ಕಾದಂಬರಿಯ (ಕಲ್ಪಿತ ಕಥೆಯ) ಬರೆದವಂಗೆ ।
ನೇಮಿಚಂದ್ರನು ನಾಗವರ್ಮನುಂ ಜೈನರೈ ।
ನೇಮಿಚಂದ್ರನು ಕಿರಿಯನೈದುವರ್ಷಂಗಳಿಂ ।
ಸೋಮನಾಥಚರಿತ್ರಕರ್ತಂಗೆ ಕವಿನಾಗಿದೇವಂಗೆ ಹರಿಹರಂಗೆ ॥ ೧೧ ॥

ಜಗವೆಲ್ಲ ತಲೆದೂಗುವಂತೆ **ರಸಕಲಿಕೆ**ಯುಂ ।
ಜಗದಧಿಪ ಕೃಷ್ಣಚಾರಿತ್ರದಾಧಾರದಿಂ ।
ಜಗನ್ನಾಥವಿಜಯವ ಬರೆದನಂ ದ್ವಿಜಕುಲದ **ರುದ್ರಭಟ್ಟ**ನಂ ವಂದಿಸುವೆನು ॥
ಅಗಣಿತದ ಶಬ್ದಶಾಸ್ತ್ರದ ರೂಪವನು ಕನ್ನ ।
ಡಿಗರಿಂಗೆ **ಶಬ್ದಮಣಿದರ್ಪಣ**ದಿ ದರ್ಪಣದಿ ।
ಸುಗಮಮಪ್ಪಂತೊರೆದ ಜೈನನಂ ವರ**ಕೇಶಿರಾಜ**ನಂ ವಂದಿಸುವೆನು ॥ ೧೨ ॥

ಕನ್ನಡಕೆ ಸಕ್ಕದವ ಬೆರಸದೆಯೆ ಬರಿಯಚ್ಚ ।
ಗನ್ನಡದಿ **ಕಬ್ಬಿಗರ ಕಾವಮಂ** ಬರೆದೆಲ್ಲ ।
ಕನ್ನಡದ ಕಬ್ಬಿಗರ ಕಾವನೆನಿ **ಪಾಂಡಯ್ಯ** ಜೈನ ಕವಿವರನ ನಮಿಪೆಂ ॥
ಹನ್ನೊಂದು ನೂರರೆಂಬತ್ತರರಲಿ ರುದ್ರನುಂ ।
ಹನ್ನೆರಡು ನೂರರರುವತ್ತರಲಿ ಕೇಶವಂ ।
ಹನ್ನೆರಡು ನೂರಮೂವತ್ತೈದರೊಳಗೆ ಆಂಡಯ್ಯನುಂ ಬಾಳ್ದರಲ್ತೆ ॥ ೧೩ ॥

ಗದುಗಿನಲಿ ವೀರನಾರಾಯಣನ ಭಕ್ತನೆಂ ।
ಬುದ ತೋರ್ಪ **ಭಾರತವ** ತಿರುಳ ಕನ್ನಡದಲ್ಲಿ ।
ಬುಧರೊಪ್ಪೆ ಬರೆದ ವರಕವಿ **ಕುಮಾರವ್ಯಾಸನಂ** ನಯದಿ ವಂದಿಸುವೆನು ॥
ಮೃದು ಮಧುರ ಶೈಲಿಯಲಿ ಮಧ್ಯಕಾಲದ ಕನ್ನ ।
ಡದಿ **ತೊರವೆ ರಾಮಾಯಣವ** ಬರೆದ ವೈಷ್ಣವನ ।
ಹದಿನೈದು ನೂರರಲಿ ಬಾಳಿದ **ಕುಮಾರವಾಲ್ಮೀಕಿಯಂ** ವಂದಿಸುವೆನು ॥೧೪॥

ಹರಿಭಕ್ತ ಕೀರ್ತನಾಕರ್ತ ಸದ್ವಿಜ ಪುರಂ ।
ದರದಾ **ಪುರಂದರಂ, ರಾಮಧಾನ್ಯದ ಚರಿತೆ** ।
ಹರಿಭಕ್ತಿಸಾರ ನಳಚರಿತೆ ಮೋಹನ ತರಂಗಿಣಿಗಳನು ವಿರಚಿಸಿರುವ ॥
ವರಕಾಗಿ ನೆಲೆಯೊಳಗೆ ಬೇಡರಲಿ ಜನಿಸಿರ್ದ ।
ವರಕವಿ **ಕನಕದಾಸ**ನಂತೆಯೇ ಹದಿನೈದು ।
ವರೆ ನೂರರಲಿ ಸರಸ ಕನ್ನಡದ ಸರಸತಿಯ ಬೀರಿದನು ನಮಿಪೆನವರ ॥ ೧೫ ॥

ಹದಿನೇಳನೆಯ ಶತಕದಾದಿಯಲಿ ಕನ್ನಡದ ।
ಬುಧರೊಲಿಯೆ **ಶಬ್ದಾನುಶಾಸನ**ವ ವರಸಂಸ್ಕೃ ।
ತದಿ ಬರೆದ ಹಾಲುವಳ್ಳಿಯ ಜೈನ **ಭಟ್ಟಾಕಳಂಕ**ನಂ ವಂದಿಸುವೆನು ॥
ಹದಿನಾರುವರೆನೂರರಲಿ ಷಡಕ್ಷರದೇವ ।
ಹದಿನಾಲ್ಕುನೂರನಾಲ್ವತ್ತರೊಳ್ ವ್ಯಾಸಕವಿ ।
ಹದಿನಾಲ್ಕುನೂರಹದಿನೈದರಲಿ ಹೆಸರಾದ ಲಕ್ಷ್ಮೀಶರಿರ್ದರಲ್ತೇ ॥ ೧೬ ॥

ವರ ರಾಜಶೇಖರ ವಿಳಾಸಮಂ ಶಬರ ಶಂ।
ಕರ ವಿಳಾಸವಸಂತೆ ವೃಷಭೇಂದ್ರ ವಿಜಯಮಂ।
ಬರೆದಿಹ ಯಳಂದೂರ ಶೈವಕವಿ ಷಡಕ್ಷರದೇವನಂ ವಂದಿಸುವೆನು ॥
ವರ ವಿಪ್ರಲಕ್ಷ್ಮೀಶಗಾದೇವಪುರನಿಲಯು ।
ಗೆರಗುವೆನು ಕನ್ನಡದ ಜೈಮಿನಿಯ ಭಾರತವ ।
ಪರಮಾದರದೊಳೋದದವರಿಲ್ಲವೀಗ್ರಂಥವಿರದಮನೆಯಿಲ್ಲವಿಲ್ಲಿ ॥ ೧೭ ॥

ಮೊದಲು ವೆಂಗಿಯದೇಶವೀಗ ಕೃಷ್ಣಾಜಿಲ್ಹೆ ।
ಮೊದಲು ಮುದುವೊಳಲೀಗ ಜಮಖಂಡಿಯು ಮುಧೋಳ ।
ಮೊದಲನೆಯ ಕವಿವರನ ಮಳಖೇಡವೀಗಿಹುದು ನೈಜಾಮ ರಾಜ್ಯದೊಳಗೆ ॥
ಮೊದಲನೆಯ ಕವಿಯೆಂಟುನೂರರೈವತ್ತರಲಿ ।
ಬುಧಬಸವಶಾಸ್ತ್ರಿ ಶಾಕುಂತಲಾದಿಗಳ ಕವಿ ।
ಹದಿನೆಂಟುನೂರು ಮೇಲೈವತ್ತರಲ್ಲಿ ತಾಂ ಬಾಳಿದರ್ ನಮಿಪೆನವರ ॥ ೧೮ ॥

ಉಸಿರಿದನು ಪಾಲ್ಕುರಿಕೆಯಾರಾಧ್ಯ ಭೀಮಕವಿ ।
ಬಸವಗುರು ಚರಿತೆಯನು ಕನ್ನಡದಿ ವರ ಚೆನ್ನ ।
ಬಸವ ಗುರು ಚರಿತೆಯನು ರಸಿಕನು ವಿರೂಪಾಕ್ಷ ಪಂಡಿತನು ವಿರಚಿಸಿದನು
ಉಸಿರುವುದಸಾಧ್ಯವಿದರೊಳು ಸಕಲ ಕವಿವರರ ।
ಹೆಸರಾದ ಕಂತಿ ಹೊನ್ನಮ್ಮಾದಿ ವಿದುಷಿಯರ ।
ಅಸಮಗುಣಿ ಶೀಘ್ರಕವಿ ಸರ್ವಜ್ಞ ಮೊದಲಾದ ಸಕಲರನು ವಂದಿಸುವೆನು ॥ ೧೯ ॥

ದೋಷರಾಶಿಗಳಿದರೊಳಿರ್ದೊಡಂ ಗುಣಕಣವ ।
ಶೇಷವಾಗಿರ್ದೊಡಂ ತಾಳ್ಮೆಯಿಂ ಕರ್ಣಾಟ ।
ಭಾಷಾಭಿಮಾನಿಗಳ್ ಪ್ರೀತಿಯಿಂ ಸೌಹಾರ್ದದಿಂ ಕ್ಷಮಿಪರೆನ್ನನೆಂದು ॥
ಆಶೆಯುಂ ತಳೆದು ಸಲೆಮಂದಮತಿಯಾದೊಡಂ ।
ಭಾಷಾಭಿಮಾನದಿಂದುತ್ಸಾಹಗೊಂಡು ಗೌ ।
ರೀಶವಾಣೀಶ ಲಕ್ಷ್ಮೀಶರಂ ಭಕ್ತಿಯಿಂ ಸಂಸ್ಮರಿಸಿ ಬರೆದೆನಿದನು ॥ ೨೦ ॥

ಕನ್ನಡಿಗನ ಕುಸುರೆಳ್ಳು.

ನೃಪತುಂಗಾದಿ ಕವೀಂದ್ರರಿಂದೆ ಸರಸೋದ್ಗ್ರಂಥಂಗಳಿಂ ಪೂಗಳಿಂ ।
ಮೃದುಪಮಾತೀತ ಸುಕಾವ್ಯಭಕ್ತಿರಸದಿಂ ಸತ್ಪೂಜೆಗೊಂಡಿರ್ಪ ನೀಂ ॥
ತಪನಂ ತುಪ್ಪದ ದೀಪದಿಂ ತಣಿವವೋಲ್ ಕರ್ಣಾಟವಾಗ್ದೇವಿಯೇ ।
ಕೃಪೆಯಿಂದೆಳ್ಳನು ಬೆಲ್ಲಮಂ ಗ್ರಹಿಸುತಾಶೀರ್ವಾದಮಂ ಪಾಲಿಸೌ ॥ ೧ ॥

ಬಹುವಿಖ್ಯಾತಚರಿತ್ರೆ ಮಾನ್ಯೆ ಜನನೀ ಕರ್ಣಾಟಭೂಮಾತೆಯೇ ।
ಬಹುರೂಪಿಂ ಮದರಾಸು ಕುರ್ಗ ಮೊಗಲಾಯ್ ಮೈಸೂರು ಮುಂಬೈಗಳೊಳ್ ॥
ಬಹುಭಾಗಂ ತಳೆದಿರ್ಪ ನಿನ್ನೊಳಿರಲೈಕ್ಯಂ ಸ್ನೇಹಮೆಂಬಿಚ್ಛೆಯಿಂ ।
ಬಹುಭಕ್ತ್ಯಾದರದಿಂದಲರ್ಪಿಸುವೆಸೆಳ್ಳಂ ಬೆಲ್ಲಮಂ ಕೊಳ್ವುದೌ ॥ ೨ ॥

ಧರೆಯೊಳ್ ಸದ್ಗುಣಯುಕ್ತಮಾದ ಸರಸೋದ್ಗ್ರಂಥಂಗಳಂ ನಿರ್ಮಿಪಾ ।
ವರ ಕರ್ಣಾಟಕ ಮಾತೃಭಾಷೆಯನು ನಾನಾರೀತಿಯಿಂ ಸೇವಿಪಾ ॥
ವರ ಕರ್ಣಾಟಕ ಮಾತೃಭೂಮಿಯಲಿ ಜನ್ಮಂಬೆತ್ತ ಸನ್ಮಾನ್ಯರೇ ।
ಉರು ಭಕ್ತ್ಯಾದರಯುಕ್ತನಾಗಿ ಕೊಡುವೆಳ್ಳಂ ಬೆಲ್ಲಮಂ ಕೊಳ್ಳಿರೈ ॥ ೩ ॥

(ಪ್ರಾರ್ಥನೆ.)

ಎಳ್ಳಿನ ಕರ್ಪು ಸಕ್ಕರೆಯ ಮಾರ್ದವಮೀಯದು ಕಣ್ಗೆ ಸೊಂಪನಾ ।
ಯೆಳ್ಳನೆ ಮುಳ್ಳುಮುಳ್ಳೆಸಗೆ ಸಕ್ಕರೆಯಿಂ ಬಲುಚಂದಮೊಪ್ಪುಗುಂ ॥
ನಿಲ್ಲದು ಚಂಚಲಂ ಮನವು ನಿನ್ನೊಳಗೆನ್ನುತ ಬಲ್ಲ ರೀತಿಯಿಂ ।
ಕಲ್ಲಿನ ಮೂರ್ತಿಯನ್ನೆಸಗಿ ಪೂಜಿಪೆವೈ ಸಲೆ ನೋಡಲೆಳ್ಳಿನಾ ॥ ೪ ॥

ಮುಳ್ಳಿನೊಳಿರ್ಪುದೇ ಸುರುಚಿ? ಸಕ್ಕರೆಯಲ್ಲಿದೆ ತೈಲದಲ್ಲಿ ಮೇಣ್ ।
ಬಲ್ಲರೆ ಬಲ್ಲರೈ ಹರಿಯೆ ನಿನ್ನಯ ನಿರ್ಗುಣ ನಿತ್ಯಭಾವಮಂ ॥
ಎಳ್ಳೊಳಗೆಣ್ಣೆಯುಂ ಸುರುಚಿ ಸಕ್ಕರೆಯೊಳ್ ನೆಲಸಿರ್ಪರೀತಿಯಿಂ ।
ದೆಲ್ಲೆಡೆಯಲ್ಲಿಯಾವರಿಸಿಕೊಂಡಿಹೆಯೆಂಧರು ನಾವು ಕಾವುದೈ ॥ ೫ ॥

ಮಹಾಕವಿ
ಶೇಕಸಾದಿಯ ವಚನಗಳು*

(೧).

ಪರಮ ಶಾಂತತೆಯಿಂದ ಮೆರೆಯುತಿಹ ನಿಶೆಯೊಳಗೆ ।
ಪರಮ ಮಿತ್ರಾಗಮನವನು ಕಾಣುತಿದಿರಾಗಿ ।
ಪರಮ ಹರುಷದೊಳೆದ್ದು ಬರುವಾಗ ಧೋತರದ ಸೆರಗಿನಿಂ ದೀಪವಾರೆ ॥
ಕರಿದಾದ ಕಾಡಿಗೆಯು ಪಸರಿಸಿದ ಪರಿಯಿಂದ ।
ಧರೆಯನಾವರಿಸಿರುವ ಕಾರಿರುಳ ಕತ್ತಲೆಯೊ ।
ಉರುತರದ ಕಾಂತಿಯಿಂ ಬೆಳಗಿದುದು ದಿವ್ಯ ತೇಜಃಪುಂಜ ಮಿತ್ರಮೂರ್ತಿ ॥೧॥

ಅನುಪಮದ ರೂಪಲಾವಣ್ಯರಾಶಿಯೊಳೆಸೆವ ।
ಸುನಿಧಿಯು ಸುದೈವವೇ ಮನೆಗೆ ಕರೆತಂದಿರಲು ।
ಮನದೊಳತ್ಯಾಶ್ಚರ್ಯವುಂಟಾಯ್ತು ವಿಧಿವಿಲಾಸಂ ಚಿತ್ರ ಚಿತ್ರಮಲ್ತೆ ॥
" ಮನೆಗೆ ಮಿತ್ರಂ ಬರಲು ದೀಪವನು ಕಳೆಯುವುದು ।
ನಿನಗೆ ಭೂಷಣವಹುದೆ ಭಾರವಾದೆನೆ ನಾನು " ।
ಎನಲು ನಾಂ ಪೇಳಿದೆಂ ಮಿತ್ರಗಡ! ಮಿತ್ರೋದಯವೆ ಆಯಿತೆನಿಸಿತೆನಗೆ ॥ ೨ ॥

ಜನರೊಳತಿಬುದ್ಧಿಶಾಲಿಗಳೆಮಗೆ ಪೇಳ್ದಿಹರು ।
ಜನರ ಮುಂದಿರುವ ದೀಪದ ಮುಂದೆ ಕಾಳ್ಕೊಗದ ।
ಮನುಜನ್ಯೆತರಲು ಬಡಿದೋಡಿಸುಗೆ, ಆ ದೀಪದಿದಿರಿನಲಿ ಬಂದು ನಿಂತ ॥
ಮನವ ಮೋಹಿಸುವ ಬಿಂಬಾಧರೆಯು ಮುಗುಳುನಗೆ ।
ತನಗೆ ಸರಿಯಾಗಿಹುವೆ ನಿನ್ನ ಕಿರಣಗಳೆಂದು ।
ಮಿನುಗುತಿರೆ ಮಮತೆಯಿಂದವಳ ಸೆರಗಂಪಿಡಿದು ದೀಪವನು ಕಳೆವುದೆಂದು ॥ ೩ ॥

(೨).

ವರಪಂಡಿತನ ಕೇಳೆ, " ಸೌಂದರ್ಯವತಿಯಾದ।
ರುಣಿಯೊಡನೇಕಾಂತದಲಿ ಬಾಗಿಲನ್ನಿಕ್ಕಿ।
ರುಣನಿರೆ ಮೋಹಾಗ್ನಿಯುರಿದು ವಿಷಯೇಚ್ಛೆಯುಕ್ಕಿಬರೆ ಮೇಲಾಡಿಸುವರು॥
ರಲು ಸುಖನಿದ್ರೆಯಲಿ ' ಖರ್ಜೂರಗಳು ಹಣ್ಣು।
ರಿದಿಹುವು, ರಕ್ಷಕರು ತಡೆಯುರೆ'ಂದಾಡುತಿರು।
ರಬರಾ ನುಡಿಯಂತೆ ಸದ್ಗುಣಗಳವನ ರಕ್ಷಿಸಬಹುದೆ ಪೇಳ್ವುದೆ"ಂದು ॥ ೪ ॥

ಸುಂದರಿಯ ಮೋಹದಿಂ ಪಾರಾದನೆಂದೊಡಂ।
ಂದಕರ ನುಡಿಯಿಂದಲವನು ಪಾರಾಗುವನೆ?।
ಂದಿಸುತ ಮನದ ಮೋಹಾಗ್ನಿಯನು ಕಷ್ಟದಿಂ ಸದ್ಗುಣವ ರಕ್ಷಿಸಿದರೂ॥
ಂದಿಸದೆ ಬಿಡದವನ ಸಂಶಯಾತ್ಮಕ ಸೃಷ್ಟಿ।
ಂದಿಸಿ ಮನೋವಿಕಾರವನೊಮ್ಮೆ ಗೆಲಬಹುದು।
ಂದಕರ ನಾಲಗೆಯ ತಡೆಯುವದಸಾಧ್ಯವೀಜಗದೊಳಗೆ"
ಪೇಳ್ದನವನು ॥ ೫ ॥

(ಸ್ಫುಟ.)

ನೋಡುವರ ದೃಷ್ಟಿಯಲಿ ಗುಣದೋಷವಿದ್ದಂತೆ।
ಾಡುವರು ನಿನ್ನ ಗುಣದೋಷಗಳ ಕಲ್ಪನೆಯ।
ಾಡುವರು ತಮಗೆ ತಿಳಿದಂತೆಯೇ ನೀನವರ ನುತಿನಿಂದೆಗಳನು ಗಣಿಸೆ॥
ಾಡಿನಲಿ ಬಾಳಿ ಬದುಕುವುದಸಾಧ್ಯವು ಕಂದ।
ೋಡದಿರು ಕಣ್ಣೆತ್ತಿ, ಕೇಳದಿರು ಕಿವಿಯೆತ್ತಿ,।
ಾಡುತಿರು ಸತ್ಕಾರ್ಯಗಳನು ನೀಂ ಜಗದೊಡೆಯ ಶ್ರೀಹರಿಯ ದಾಸನೆಂದು॥೬॥

---

* "*The translations are not always literal—The originals ing sometimes abridged and sometimes paraphrased.*"

Dr. Rabindranath Tagore.

ಡಾ. ರವೀಂದ್ರನಾಥ ಠಾಕೂರರವರ ಕವಿತೆಗಳ ಭಾವಾನುವಾದವು.

(೧).

ಯುವತಿಯರೆ ಸೃಷ್ಟಿಕರ್ತನ ಕರ್ಮಕುಶಲತೆಯೆ ।
ನಿವಗೆ ಕಾರಣವಲ್ಲ ನರಜಾಜ್ಞೆಯುಂಟದರೊ- ।
ಳವರು ತಮ್ಮಾಂತರ್ಯ ಸೌಂದರ್ಯದಿಂದಲಂಕರಿಸುವರು ನಿರುತ ನಿಮ್ಮ ॥
ಕವಿವರರು ಕಲ್ಪನೆಯ ಬಂಗಾರದೆಳೆಗಳಿಂ ।
ದವಕುಂಠನವನೆಸಗುವರು ಚಿತ್ರಶಿಲ್ಪಿಗಳು ।
ಭುವನದೊಳ್ ಸಾವು ಮುಪ್ಪುಗಳಿಲ್ಲದಿರುವ ಸದ್ರೂಪವನು ಚಿತ್ರಿಸುವರು ॥ ೧ ॥

ವರುಣದೇವತೆ ಮುತ್ತುಗಳನಿತ್ತು, ಭೂದೇವಿ ।
ವರಸುವರ್ಣವನಿತ್ತು, ವನಗಳು ವಸಂತದೊಳ- ।
ಗೆರೆದು ಪೂಮಳೆಯಿಂದ ಸಿಂಗರಿಸಿ ಸಲೆ ನಿಮಗಮೌಲ್ಯತೆಯ ನೀಯುತಿಹುವು ॥
ನರರ ಹೃದಯೇಚ್ಛೆಗಳು ತಮ್ಮ ವೈಭವವನ್ನು ।
ಸುರಿದಿಹುವು ನಿಮ್ಮ ತಾರುಣ್ಯಕ್ಕೆ ಮರುಳಾಗಿ ।
ತರುಣಿಯರೆ ನೀವರ್ಧ ಪೆಣ್ಗಳುಳಿದರ್ಧ ನಾನರಿಯೆ ಕನಸೋ ಮಾಯೆಯೋ॥೨॥

(೨).

ಅಂಧ ಬಾಲಿಕೆಯೊಬ್ಬಳೆನಗೆ ಪೂಮಾಲೆಯನು ।
ಚಂದದಲಿ ನೀಡಿದಳು ಮುಚ್ಚಿ ತಾವರೆಯೆಲೆಯ ।
ಸಂದಪೂದೋಟದಲಿ ನಗುತಿರಲು ಬಾಲರವಿ, ದುಃಖಾಶ್ರುಸುರಿಯೆ ಧರಿಸಿ ॥
ನೊಂದು ನುಡಿದೆನು ಭರದಿ ಮುದ್ದಿಟ್ಟು ಮಮತೆಯಲಿ ।
ಕಂದ! ನೀನಂಧಳಾಗಿಹೆ ಪೂಗಳಂತೆಯೇ ।
ಇಂದು ನೀನೆನಗಿತ್ತ ಕಾಣಿಕೆಯ ಸೌಂದರ್ಯವನು ತಿಳಿಯಲಾರೆ ನೀನು ॥ ೨ ॥

(೩).

ಪರಿಪರಿಯ ಬೆಳಸುಗಳ ಹಸುರುಡುಗೆಯುನ್ನುಟ್ಟು ।
ವರುಷ ಋತುವಿನ ಸುಭಗೆ ಭೂದೇವಿ ಶೋಭಿಸಲು ।
ಗಿರಿಶಿಖರದಿಂದಿಳಿದು ‘ ಗುಳು ಗುಳು ’ ನಿನಾದದಿಂ ಹರಿಯುತಿಹ ಶುಭ್ರಜಲದ ॥
ಗಿರಿಶಿಲಾಜಲಧಾರೆ ಪುತ್ರವಾತ್ಸಲ್ಯದಿಂ ।
ಕರೆವ ಮಾತೆಯು ದುಗ್ಧವಾಹಿನಿಯು ತೆರದಿಂದೆ ।
ಮೆರೆಯುತಿರೆ, ರವಿರಶ್ಮಿ ಕಿರುವೋಡದೊಳ್ಮುಳುಗಿ ತಣ್ಪುವಡೆದೆಸೆಯುತಿರಲು ॥೧॥

ಮನೆಯ ಮುಂದಿನ ಚಿಕ್ಕ ಕಾಲುವೆಯ ಜಲದಲ್ಲಿ ।
ಮನವ ಮೋಹಿಸುವ ಕಾಗದದೊಂದು ಹಡಗನ್ನು ।
ಘನತರಾಮೋದದಲಿ ನಡೆಸುತಿರಲೆಣಿಯಿಲ್ಲದಾಯ್ತೆನ್ನ ಮನದ ಸುಖಕೆ ॥
ತನು ನಡುಗೆ ಭರದೆ ಬೀಸಿತು ಮಳೆಯ ತಂಗಾಳಿ ।
ಹನಿಗಳೊಂದೆರಡುದಿರೆ ಚಿಂತೆಯಲಿ ನೋಡಿದೆನು ।
ಮುನಿದ ಸೃಷ್ಟಿಯ ಘೋರ ರೂಪದಿಂದೆಡೆಯೊಡೆದು ನೀರಾಯ್ತು ಕಷ್ಟ! ಕಷ್ಟ! ॥೨॥

ಉರಿದೇಳ್ವ ಕೋಲ್ಮಿಂಚು ಕಣ್ಗೆಡಿಸೆ ಮೇಘರವ ।
ವುರೆನಡುಗಿಸಲು ಧರೆಯ ಮುಸಲಧಾರಾವೃಷ್ಟಿ ।
ಸುರಿದುದೀ ಬ್ರಹ್ಮಾಂಡ ಘಟವೊಡೆದು ಸೋರ್ವ ಜಲಧಾರೆಯೋ ಪೇಳೆನಲ್ಕೆ ॥
ಅರರೆ! ಮುಳುಗಿದುದೆನ್ನ ಹಡಗು ಕೆನ್ನೀರೊಳಗೆ ।
ಹರುಷದಲಿ ನಲಿವೆನ್ನ ಸಂತಸವ ಸಹಿಸದಲೆ ।
ಬಿರುಗಾಳಿ ಮುತ್ಸರದೆ ಬಿರುಮಳೆಯ ಕರೆತಂದುದಕಟಕಟೆನುತ ಮರುಗುತಿರ್ದೆ ॥ ೩ ॥

ಕಳೆದುದಾ ಬಾಲ್ಯದಾಟದ ದಿನವು ಯೌವನವು ।
ಕಳೆಯೆ ಬಂದಡಸಿದುದು ದುರ್ವಾರ ವಾರ್ಧಕವು ।
ಬಳಲಿ ಬತ್ತಿದುವೆನ್ನ ತನುಮನಗಳೀ ಘೋರಸಂಸೃತಿಯ ತಾಪದಿಂದೆ ॥
ಖಳವಿಧಿಯ ಸಂಸೃತಿಯ ದುಷ್ಕೃತಿಯ ನೆನೆದು ಮನ ।
ದೊಳಗದನು ಹಳಿಯುತಿರೆ ಬಾಲ್ಯದಲಿ ಹಡಗನ್ನು ।
ಮುಳುಗಿಸಿದ ಬಿರುಗಾಳಿಯನು ಹಳಿದ ಮಾತು ನೆನಪಾಗಲಾಶ್ಚರ್ಯವಾಯ್ತು ॥೪॥

ಸ್ವಾರ್ಥತೆ.

ಮರಣವೇ ಲೋಭಕ್ಕೆ ಕೊನೆ ಗಡ! ।
ಧರಿಸಿ ಲೋಭವ ನಲಿಯುತಿರೆ ನರ ।
ಹರುಷವಾರಿಧಿಯೊಳಗೆ ಬಹು ದುರ್ಯೋಗತಮದೊಡನೆ ॥
ಬರುವ ಝುಂಝಾವಾತಘಾತದೆ ।
ಹರಿದು ಹಂಚಾಗುವನು ಧರೆಯಲಿ ।
ಸ್ಥಿರವದಾರಿಗೆ ಸುಖದ ಬಾಳುವೆ ಸೃಷ್ಟಿತತ್ವವಿದು ॥ ೧ ॥

ಮಸದ ಬಯಕೆಗಳೆನಿತು ಸಾಧಿಸ ।
ಲನಿತನಿತು ಲೋಭಕ್ಷುಧಾಗ್ನಿಯೆ ।
ಮನದೊಳುರಿದೇಳುವುದು ವಿಶ್ವವೆ ತನ್ನ ತುತ್ತೆಂದು ॥
ಘನವಿವೇಕವ ಮರೆದು ನುಂಗಲು ।
ಮನುಜನಾಲೋಚಿಸುವನಕಟಾ! ।
ಜನರೊಳಪಹಾಸ್ಯಕ್ಕೆ ನಿಂದೆಗೆ ಲಕ್ಷ್ಯವೀಯದೆಯೆ ॥ ೨ ॥

ನಿಂದ್ಯ ಭಕ್ಷ್ಯದೆ ಬೆಳೆಯೆ ತನ್ನೊಳು ।
ನಿಂದ್ಯ ಗುಣಗಳು ನೀಚ ನಿರ್ದಯ ।
ನಿಂದ್ಯ ನಾಚಿಕೆಗೇಡಿಯೆನಿಪಂ ಸ್ವಾರ್ಥಪರನರನು ॥
ನಿಂದ್ಯಮಾನವಲೋಭಿ ಸರ್ಪನು ।
ನಿಂದ್ಯಕಾರ್ಯಾಸಕ್ತನಾಗಿರೆ ।
ನಿಂದ್ಯಭಕ್ಷಕ ಗೃಧ್ರನಂದದಿ ಮೃತ್ಯುವೆರಗುವುದು ॥ ೩ ॥

ಸ್ವಾರ್ಥಸಾಧನೆಯೆಂಬ ಭೂತಕೆ ।
ಸ್ವಾರ್ಥಸಾಧಕನಾತ್ಮವೇ ಬಲಿ ।
ಪಾರ್ಥಿವಪದಾರ್ಥಂಗಳಿಂ ಸ್ವಾರ್ಥಾಗ್ನಿಯಾರುವುದೇ ॥
ಸ್ವಾರ್ಥನೌಕಾವಾಹಿಯರಿಯನು ।
ಸ್ವಾರ್ಥನೌಕೆಯ ಗುಪ್ತಮಾರ್ಗವ ।
ಸ್ವಾರ್ಥವನಿಶಂ ಮಿತ್ರಮೃತಿಗಿರಿಯೆಡೆಗೆ ಸಾಗುವುದು ॥ ೪ ॥

ವಾಸವದತ್ತೆ.

ಘೋರಾಂಧಕಾರದಲಿ ಮುಳುಗಿರಲು ಜಗವೆಲ್ಲ ।
ತಾರಗೆಗಳಡಗಿರಲು ಮೋಡದಲಿ ಜನರೆಲ್ಲ ।
ಸೇರಿ ತಮ್ಮಾಲಯವ ಮಲಗಿರಲು, ಮಲಗಿ ಮಥುರಾಪುರಿಯೆ ನಿದ್ರಿಪಂತೆ ॥
ತೋರುತಿರೆ ಸನ್ಯಾಸಿಯುಪಗುಪ್ತನಾಪುರಿಯು ।
ಸೇರಿ ಹೆಬ್ಬಾಗಿಲಲಿ ಮಲಗಿ ನಿದ್ರಿಸುತಿರಲು ।
ನಾರಿಯೊಬ್ಬಳ ಲಲಿತನೂಪುರದ ರವದಡಿಯೆ ಮೂಡಿತವನೆದೆಯುಮೇಲೆ ॥ ೧ ॥

ಶ್ರಾವಣದ ಮಧ್ಯರಾತ್ರಿಯ ತಿಮಿರರಾಶಿಯಲಿ ।
ಭೂವನಿತೆ ಮುಳುಗಿರಲ್ಕೆದೆಯುಮೇಲಡಿಯಿಡಲು ।
ಭೂವಿನುತನುಪಗುಪ್ತನತಿವಿಸ್ಮಯಂಗೊಂಡು ನಿದ್ರೆಯಿಂದೆದ್ದು ಕುಳಿತು ॥
ಆವನಿತೆ ಮೋಸವಾಯ್ತುಕಟಿನುತ ಕರದೀಪ ।
ದಾವರಣವನು ಸರಿಸೆ ನೋಡಿದನು ನಸುನಗುತ ।
ಲಾವೂರ ವೇಶ್ಯೆ ವಾಸವದತ್ತೆಯನುಪಮದ ಲಾವಣ್ಯರಾಶಿಯನ್ನು ॥ ೨ ॥

ಪರಿಪರಿಯಲಂಕಾರಗಳ್ ಪ್ರಿಯನ ಮುಖಚಂದ್ರ ।
ಕಿರಣರಂಜಿತೆಯಂತೆ ವರತನುಚ್ಛವಿಯುನಾ ।
ವರಿಸಿರುವ ಚೀನಾಂಬರದ ಮರೆಯೊಳೆಸೆಯುತಿರೆ ಕಣ್ಮನವ ಸೆಳೆಯುತಿರಲು ॥
ಅರುಣೋದಯದೊಳರಳಿ ತನಿಗಂಪ ಬೀರುವೆಳೆ ।
ಯರವಿಂದದೆಸಳಂತೆ ಕೋಮಲೆ ಸುವರ್ಣೆ ಸುಂ ।
ದರಿ ಸುದೃಢೆ ಶೈಶವೋದ್ಭಿನ್ನಯೌವನೆ ರಮಣಿ ಸಂಪನ್ನೆ ಮೆರೆದಿರ್ದಳು ॥ ೩ ॥

ಪುರುಷವರನೆದೆಯುಮೇಲಡಿಯಿಟ್ಟ ದೋಷದಿಂ ।
ಸುರೆ ಬೆದರಿ ಚಿಂತಿಸುವ ಹರಿಣಲೋಚನೆ ತನ್ನ ।
ಕರತನುವ ಪಿಂತೆಗೆದು ಮೇಲ್ಸೆರಗನೋಸರಿಸಿಕೊಳುತೆ ಕಡೆಗಣ್ಣಿನಿಂದೆ ॥

ತರುಣನ ಸುರೂಪಮಂ ಸುದೃಢತರ ಕಾಯಮಂ ।
ಪರಮ ತೇಜಃಪುಂಜ ಮುಖಮುದ್ರೆ (ಮುಖಭಾವ) ಶಾಂತಿರಸ ।
ವೆರಸಿ ಮೋಹಕ ಸುಧಾಕರನಂತೆ ಮೆರೆವುದಂ ನೆರೆನೋಡಿ ಮೋಹಿಸಿದಳು ॥ ೪ ॥

ಮಧುರಾಂಗಿ ನಸುಲಜ್ಜೆಯಿಂದ ನಾಲಗೆ ತಡೆಯು ।
ಲಧರವುರೆನಡುಗುತಿರೆ ದೃಷ್ಟಿ ಮೇಲೇಳದಿರೆ ।
ಮಧುರ ರವದಲಿ ನುಡಿದಳಾಯುತಿಗೆ ತರುಣ ಸುಕುಮಾರ ನೀಂ ಕ್ಷಮಿಸು ಕ್ಷಮಿಸು ॥
ಮಧುರಗುಣ ಸುಮಧುರಾಕಾರ ದಯುಮಾಳ್ಪುದೀ ।
ಮೃದುಮಧುರತನುವಿದೀ ದುರ್ಧರಶಿಲಾಶಯ್ಯೆ ।
ಯಧಿಕತರ ಕಷ್ಟಮಂ ಸಹಿಸೆ ಹುಟ್ಟಿದುದಲ್ಲ ನಡೆಯೆನ್ನ ಮಂದಿರಕ್ಕೆ ॥ ೫ ॥

ವನಿತೆಯು ಮನೋಗತವನರಿತನುಪಗುಪ್ತನತಿ ।
ವಿನಯದೊಳು ಪೇಳಿದಂ ಸಮಯುವೆನಗಿಲ್ಲೀಗ ।
ಲನುಕೂಲಸಮಯುವೈತರಲಾನೆ ಬಹೆನು ನಿನ್ನಾಲಯಕೆ ಮೋದದಿಂದ ॥
ನಿನಗಾಗಿ ಕಾಯ್ದು ಕುಳಿತಿರುವ ವಿಟನೆಡೆಗೆ ಪೋ ।
ಗನುನಯದೆ ಸಂತಸಂಗೊಳಿಸವನ ನೀನೀಗ ।
ಲೆನಗಾಗಿ ಮನದಿ ಮರುಗದಿರಮ್ಮ! ಈ ಶಿಲಾಶಯ್ಯೆಯೇ ಸೌಖ್ಯವೆನಗೆ ॥ ೬ ॥

ಸಿಡಿಲೆರಗಿ ಕಮರಿದೆಳವಾಳೆ ಸುಳಿಯುಂವದಲಿ ।
ಕಡಿದೊರಗಿಸಿರುವಶೋಕದ ತಳಿರಿನಂದದಲಿ ।
ನಡುನಡುಗಿ ಸಲೆಬಾಡಿದಾನನದ ವೇಶ್ಯೆ ವಾಸವದತ್ತೆ ಗಾಸಿವಡೆದು ॥
ಅಡಿಯ ಮುಂದಿಡಲಾರದಲೆ ತೊಳಲಿ ಬಳಲುತಿರೆ ।
ಘುಡುಘುಡಿಪ ಘನಘೋರ ಮೇಘರವವಾದಂತೆ ।
ಸಿಡಿಲಿನ ಶಲಾಕವೇ ಹೊಳೆದಂತೆ ಕಣ್ಗೆಟ್ಟ ಮನದೊಳಗೆ ತೋರಿತವಳ್ಗೆ* ॥ ೭ ॥

ಮೂಡಗಾಳಿಗಳಡಗಿ ತೆಂಕಣದ ನಸುಗಾಳಿ ।
ಯಾಡತೊಡಗಿತು ಧರಾವನಿತೆ ನವಯೌವನದ ।
ಜೋಡಣೆಯು ಹೂಡಿದಳು ತರುಲತೆ ಲತಾಂತಗಳ ಚೆಂದಳಿರ ಗೊಂಚಲೆರಗಿ ॥
ನೋಡುವರ ಕಣ್ಮನವ ತಣಿಪ ಫಲಮಂಜರಿಯು ।
ನೀಡುವುವೊ ದಾರಿಗರಿಗೆನೆ ಫಲಭರದೆ ಬಾಗಿ ।
ನಾಡೆ ಶೋಭಿಸುತಿರ್ದುವೆಡಬಲದಿ ಮೆರೆವ ಮಥುರಾಪುರಿಯ ಬೀದಿಗಳಲಿ ॥೮॥

ಹಸುರುಡುಗೆಯನ್ನುಟ್ಟು ಚೆಂದಳಿರ ತಿಲಕವನು ।
ನೊಸಲೊಳಗೆ ಧರಿಸಿ ಫಲಮಂಜರಿಯುಲಂಕಾರ ।
ವೆಸೆಯೆ ಮರಿದುಂಬಿಗಳ ಮುಡಿಯೊಳಗೆ ಪೂಮಾಲೆಗಳನು ಮನದಣಿಯೆ ಮುಡಿದು॥
ನಸುನಗೆಯ ಬೆಳದಿಂಗಳೆಂಬ ಚೀನಾಂಬರದ ।
ಮುಸುಕಿನ ನವಾಂಗನೆ ಧರಾಮಾನಿನಿಗೆ ಭರದೊ ।
ಳುಸಿರಿದುವು ಪ್ರಿಯಕರವಸಂತನೃಪನೊಸಗೆಯನಃ ಕೋಗಿಲೆಗಳುಲಿದುನಲಿದು ॥೯

ನವವಸಂತಾಗಮನವನು ಕಂಡು ನೃಪವರಂ ।
ನವವಸಂತೋತ್ಸವವ ಸಾರಿದನು ನಗರದಲಿ ।
ನವಋತುಸ್ನಾತೆ, ಜ್ಯೋತ್ಸ್ನಾಸ್ನಾತೆ ವನದೇವಿಯೋಲಗದೆ ನಡೆವುದೆಂದು ॥
ನವತರುಣ ತರುಣಿಯರು ಮೋದದಲಿ ನಡೆದರು ।
ತ್ಸವಕೆಂದು, ವೃದ್ಧರವರನುಸರಿಸಲೆಳಮಕ್ಕ ।
ಳವರ ಹಿಂಬಾಲಿಸಲ್ಕಿಂತು ಮಧುರಾಪುರಿಯು ಜನರಹಿತವಾದುದಂದು ॥ ೧೦ ॥

ಜನರೆಲ್ಲ ವನದೇವಿಯೋಲಗದೊಳುತ್ಸವದ ।
ಘನತರಾಮೋದದಲಿ ತೊಡಗಿರ್ದರಿತ್ತಲಾ ।
ಜನಹೀನನಗರದಲಿ ಯತಿತಿಲಕನುಪಗುಪ್ತನೈದುತಿರೆ ವೇಗದಿಂದೆ ॥
ಜನರೊಬ್ಬರಿಲ್ಲದಿಹ ಸಮಯವನು ನೋಡುತಲೆ ।
ನೆನಪಾದಳೇನಣ್ಣ ! ವೇಶ್ಯೆ ವಾಸವದತ್ತೆ ।
ನಿನಗೆನುತ ಕೋಗಿಲೆಗಳುಲಿಯುತಿರೆ ಗಹಗಹಿಸಿ ನಗುತಿರ್ದನಮೃತಕರನು ॥೧೧॥

ಯತಿತಿಲಕನಾಗ ನಗರವ ಬಿಟ್ಟು ಹೊರಗೆ ಬಂ ।
ದತಿವೇಗದಿಂದೆ ಕೋಟೆಯ ಗೋಡೆಯಂಚಿನಲಿ । (ಯೋರದಲಿ)
ಯತಿವಿಲಾಸಿನಿಯೆನಿಸಿ ಮೆರೆದಿರ್ದ ವೇಶ್ಯೆ ವಾಸವದತ್ತೆಯೆಡೆಗೆ ಬಂದು ॥
‘ ಮತಿಹೀನರಾಗಿ ಪಶ್ಚಾಚರಣೆ ಗೈವರೀ ।
ಗತಿಗೆ ಗುರಿಯಾದೊಡೇನಾಶ್ಚರ್ಯ ’ ವೆಂದುಸಿರು ।
ತತಿಕರುಣೆಯಿಂದವಳ ಶಿರವ ಪಿಡಿದೆತ್ತಿ ತನ್ನಯ ತೊಡೆಯೊಳಿಟ್ಟುಕೊಂಡು ॥೧೨॥

ತೃಷಿತವಿಟರಿಂಗಮೃತವನ್ನಿತ್ತು ಬೆಂಡಾಗಿ ।
ಕೃಶವಾದುದೀಯಧರಮೆನೆ ಕಂದಿ ಕುಂದಿಹುದು ।
ವಶವಾಗದಿರುವ ಸತ್ಪುರುಷರೆದೆಯೊಡೆವಂತೆ ಸಮ್ಮೋಹನಾಸ್ತ್ರವನ್ನು ॥
ಎಸೆದೆಸೆದು ದಣಿದೀಗ ವಿಶ್ರಾಂತಿವಡೆವಂತೆ ।
ಬಿಸಜಾಂಬಕಗಳೆರಡು ಮುಚ್ಚಿಹವು ಸರ್ವಾಂಗ ।
ವಸುಗುಂದೆ ಈಗಲೋ ಇನ್ನರ್ಧಗಳಿಗೆಗೋ ಎಂಬಂತೆ ತೋರುತಿಹುದು ॥೧೩॥

ಮೊದಲ ವಿಟನಂಗಸಂಗದ ದಿನದ ಮುತ್ತುರ ।
ತ್ನದ ರಾಶಿ ಸರ್ವಾಂಗದೊಳು ಮೆರೆವುದೆನೆ ಮುಳ್ಳ ।
ತುದಿ ಮೊನೆಯನಿಡಲಿಂಬು ದೊರೆಯದಿರೆ ಬೊಕ್ಕೆಗಳು ಸುರಿದಿಹುವು ಬಿಳಿದು ಕೆಂಪು॥
ವಿಧಿವಿಲಾಸದ ಬಲೆಯ ಸುವಿಚಾರಶಸ್ತ್ರದಲಿ ।
ಸದೆದೊಗೆದು ಸನ್ಮಾರ್ಗದಲಿ ನಡೆಯುಲಾರದಿರು ।
ವಧಮರನು ಕಣ್ಣೆತ್ತಿನೋಡದಲೆ ಬಿಡುವುದಿದು ಸುಜನರಿಗೆ ಸರಿಯೆ ಹರಿಯೆ ॥೧೪॥

ಇಂತು ಚಿಂತಾಕ್ರಾಂತನಾಗಿಯುಪಗುಪ್ತಯತಿ ।
ಕಂತುಪಿತನನು ನೆನೆದು ತಂದ ಮಂತ್ರೋದಕವ ।
ಸಂತಸಂ ಮಿಗಲವಳ ಕಣ್ಗಳಿಗೆ ಸೂಸಿ ಬತ್ತಿರುವ ಬಾಯ್ಗೆರೆದು ತಣಿಸಿ ॥
ಚಿಂತೆಯನು ಬಿಟ್ಟೇಳು ಮಗುವೆ ವಾಸವದತ್ತೆ ।
ಪಿಂತಣಾ ದುಷ್ಕೃತಿಯ ನೆರೆಮರೆದು ಸಂಸ್ಕೃತಿಯ ।
ಸಂತಾಪಹಾರಕ ಶ್ರೀಹರಿಯ ನೆನೆಯೆಂದು ಮೈದಡವೆ ಮೋದದಿಂದ ॥ ೧೫ ॥


ಅಂದು ಯತಿ ನೂಪುರದ ರವದ ಪಾದಾಘಾತ ।
ದಿಂದ ನಿದ್ರಾಭಂಗವಾಗೆದ್ದು ಕುಳಿತಂತೆ ।
ಇಂದು ಯತಿವರನಿತ್ತ ಚೈತನ್ಯದಿಂದ ಕಣ್ದೆರೆದೆದ್ದು ಕುಳಿತಳವಳು ॥
ಹಿಂದಾದ ಕಥೆಯನೆಲ್ಲವ ನೆನೆದು ಪೇಳಿದಳು ।
ತಂದೆ ನೀನ್ನೈತಂದೆಯೇಕಿಲ್ಲಿ? ಪಾಪಿಯೆನ ।
ಗಿಂದು ಮರಣವು ಬಹುದು ಸಕಲ ದುಷ್ಕೃತ್ಯಗಳ ಕೊನೆಯುಹುದು ಜಗದೊಳಿನ್ನು ॥

ಬದುಕಿ ಬಾಳುವ ಬಯಕೆ ಸಾಕೆಂದು ನೆನೆದಿರ್ದೆ ।
ನಿದೆ ನೋಡು ಸರ್ವಾಂಗಸೌಂದರ್ಯ! ಸೌಭಾಗ್ಯ ।
ಮಿದೆನೋಡು! ನೆನಪಾಯ್ತು ನಿನ್ನ ನುಡಿಯೀ ಶಿಲಾಶಯ್ಯೆಯೋ ಸೌಖ್ಯವೆಂಬ॥
ಬುಧವರನೆ ಅತುಲಕರುಣಾಮಯನೆ! ಬಹುದುಷ್ಟ ।
ಹೃದಯವಿದು ಸತ್ಯಶೌಚಾಚಾರ ಸತ್ಪ್ರೇಮ ।
ವಿದರೊಳೆಳ್ಳಷ್ಟಿಲ್ಲ ಧನದಾಶೆ ಕಾಮವಾಸನೆಗಳಾಗರವಿದಹುದು ॥ ೧೭ ॥

ಆ ದುಷ್ಟ ವಾಸನೆಗಳುಕ್ಕಿ ಹೊರಸೂಸಿದುವೊ ।
ಈ ದುಷ್ಟ ದೇಹಮಂ ದಂಡಿಸಲು ಪೇಳೆನಲ್ ।
ಬಾಧೆಗೊಳಗಾಗಲಾನೀಪರಿಯ ಪುರವಾಸಿಗಳು ಬಿಸುಟರೆನ್ನನಿಲ್ಲಿ ॥
ಮೋದದಲಿ ನಲಿವ ವಿಟರೀಗೆನ್ನ ಮಂದಿರದ ।
ಹಾದಿಯನು ತುಳಿಯದಂತಾಗೆ ವೈಭವವೆಲ್ಲ ।
ಕಾದೆಣ್ಣೆಯಲಿ ಬಿದ್ದ ನೀರಿನಂತಡಗಿದುದು ಮುಂದೇನು ಗತಿಯೊ ಯತಿಯೇ ॥೧೮॥

ಸೆರಗಿನಲಿ ದೀಪವನು ಮರೆಮಾಡಿ ವಿಟನೆಡೆಗೆ ।
ತೆರಳುವಂದದೆ ಮನವು ಸುಜ್ಞಾನದೀಪವನು ।
ಹೊರಗಣಿಂದ್ರಿಯ ಲಾಲಸೆಯ ಪಟದ ಮುಸುಕಿಟ್ಟು ಸಾಗುವುದು ನರಕದೆಡೆಗೆ ॥
ಪರರೊಡವೆ ಪರರಗುಣವಪಹಾರಗೈಯೆ ಯತಿ ।
ವರನ ನಿದ್ರಾಭಂಗದಾಘಾತದಂತಾಗಿ ।
ಬರಲೊಮ್ಮೆ ಸುಜ್ಞಾನವದನಿರದೆ ಮುಸುಕುವುವು ಷಡ್ರಿಪುಗಳೊಂದುಗೂಡಿ ॥೧೯॥

ನೀರೊಳಗೆ ಬಿಟ್ಟ ಕೊಡವದು ತುಂಬಲಿಳಿವಂತೆ ।
ಘೋರದುಷ್ಕೃತ್ಯಗಳ ಭಾರದಲಿ ಮಾನವನು ।
ಸಾರುವನಧೋಗತಿಯ ಬಳಿಕ ಸತ್ಪುರುಷರ ಸುಸಂಗತಿಯ ಸೂತ್ರದಿಂದೆ ॥
ಏರಿಬಂದರೆ ಮೇಲೆ ಸುವಿವೇಕರವಿರಶ್ಮಿ ।
ತೋರುವುದು ಸನ್ಮಾರ್ಗವನು ತಾನೆ, ನಿನಗೀಗ ।
ಬೇರೆಗತಿ ಬೇಕಿಲ್ಲ ತೆರಳೆಂದು ನುಡಿದನುಪಗುಪ್ತಯತಿ ಮಮತೆಯಿಂದ ॥ ೨೦ ॥



ಪ್ರತಿಧ್ವನಿ.

ಗಿರಿಯ ಕಂದರದಲ್ಲಿ ಸೃಷ್ಟಿಯ ।
ಸಿರಿಯ ನೋಡುತ ಕೊಳಲನೂದುತ ।
ಪರಮ ಹರುಷದೊಳಿರುವ ಗೋಪಾಲಕರ ಬಾಲಕನು ॥
ಹರುಷದಿಂದೆಳೆಹುಲ್ಲ ಮೇಯುತ ।
ಚರಿಸುತಿರೆ ಗೋವುಗಳು ದೂರದಿ ।
ಕರದ ಕೊರಡಿಯ (ಚಾಟಿಯ) ಬಡಿದು 'ಚಟಪಟ'
ಹಾಡತೊಡಗಿದನು ॥ ೧ ॥

'ಗಿರಿಯ ನೀಂ ಕಿರುಬೆರಳಿನಗ್ರದಿ'।
'ಗಿರಿಯ ನೀಂ ಕಿರುಬೆರಳಿನಗ್ರದಿ'।
ತಿರುಗಿ ಕೇಳಿಸಿತೊಡನೆಯಾನುಡಿ ಗಿರಿಯ ಶಿಖರದಲಿ ॥
'ಧರಿಸಿಯೆಮ್ಮನು ಪೊರೆದ ದೇವನೆ'।
'ಧರಿಸಿಯೆಮ್ಮನು ಪೊರೆದ ದೇವನೆ'।
ತಿರುಗಿ ಕೇಳಿಸಿತೊಡನೆಯಾನುಡಿ ಮೊದಲಿನಂದದಲಿ ॥ ೨ ॥

ಓಡಿದಂತೆಯೆ ತಿರುಗಿಯಾಡುವ ।
ಗೂಢತತ್ವವನರಿಯಲಾರದೆ ।
ಗಾಢಕೋಪದೆ ಮರಳಿ ಕೇಳ್ದನು ಗೋಪ ಬಾಲಕನು ॥
'ಮೂಢ ನೀನಾರೇತಕಣಕಿಪೆ'।
'ಮೂಢ ನೀನಾರೇತಕಣಕಿಪೆ'।
ಗಾಢತರ ಕೋಪದಲಿ ಕೇಳಿಸಿತೊಡನೆ ಮಾರ್ನುಡಿಯು ॥ ೩ ॥

ನೆರಹಿ ಗೋವುಗಳನ್ನು ಮನೆಗೈ ।
ತರುತ ತಂದೆಗೆ ಪೇಳ್ದನೆಲ್ಲವ ।
ಗಿರಿಯ ಶಿಖರದೊಳಡಗಿ ನಿಂತಿಹರೆನ್ನ ವೈರಿಗಳು ॥
ಪರಿಪರಿಯಲೆನ್ನನ್ನು ನಿಂದಿಸು ।
ತಿರುವರವರನು ನೀನು ದಂಡಿಸ ।
ದಿರಲು ಪೋಗೆನು ನಾಳೆ ದನಗಳನಲ್ಲಿ ಮೇಯಿಸಲು ॥ ೪ ॥

ಮಗನ ಮಾತನು ಕೇಳಿ ಗೋಪನು ।
ನಗುತಲೆಂದನು ಕಂದ ಕಂದರ ।
ದಗಡು ವೈರಿಯ ದಂಡಿಸಲು ನೀನಳುವೆ ನಿಶ್ಚಯವು ॥
“ ನಗೆಯು ಮಾತಲ್ಲಯ್ಯ” ಎನೆ ಮಗು, ।
ನಗೆಯು ಮಾತೇನಿರುವುದಿದರೊಳು ।
ಮಗುವೆ ನೀನಾಡಿರುವ ನುಡಿಗಳೆ ಮರಳಿ ಕೇಳಿದುವು ॥ ೫ ॥

ನಿನಗೆ ನೀನೇ ವೈರಿ ನೀನೇ ।
ನಿನಗೆ ಹಿತಚಿಂತಕನು ಲೋಕದಿ ।
ನಿನಗೆ ಸುಖದುಃಖಗಳನೀಯುವರನ್ಯರೆನ್ನದಿರು ॥
ಜನರೊಳಾಡುವ ನುಡಿಯು ಪಡಿನುಡಿ ।
ಜನರೊಳೆಸಗುವ ಕೃತಿಯು ಪ್ರತಿಕೃತಿ ।
ನಿನಗೆ ದೊರೆವುವು ಗಿರಿಯ ಶಿಖರದ ನುಡಿಯ ಗೂಢವಿದು ॥ ೬ ॥

(ಸ್ಫುಟ.)

ನೀನೆ ನಿಜಸುಖದಾಗರವು ತಿಳಿ ।
ನೀನೆ ದಿವ್ಯಾಮೃತದ ಸಾಗರ ।
ಸ್ವಾನುಭವ ಸುಜ್ಞಾನವನು ಪಡೆ ಶೋಧಿಸಾತ್ಮವನು ॥
ನೀನು ದೇಹವೆ ನೀನು ಬುದ್ಧಿಯೆ ।
ನೀನು ಕಾಮುಕ ಕಾಮ್ಯವಸ್ತುವೆ ।
ನೀನು ಮನವೇನಾತ್ಮ! ಸುಸ್ಥಿರ ಸಕಲ ನಿರ್ಲಿಪ್ತ ॥ ೭ ॥

ಮಹಾಕವಿ
ಶೇಕ ಸಾದಿಯ ವಚನಗಳು.

(೧).

ಹರಕು ಕಂತೆಗೆ ಕಂತೆಯನು ಹೊಲಿದು ಹೊದೆಯುತಿಹ ।
ಪರಮ ದಾರಿದ್ರ್ಯಕ್ಕೆ ನೆಲೆಯೆನಿಪ ಸನ್ಯಾಸಿ ।
ವರನು ಬಹು ಕಷ್ಟದಲಿ ತಾಳ್ಮೆಯಿಂದಿರುತಿರಲು ನುಡಿಯುತೀವಾಕ್ಯಗಳನು ॥
“ ಹರಕು ಕಂಬಳಿ ಮುರುಕು ರೊಟ್ಟೆ ತಂಗ (ಗೂ)ಳ್ಗಳೇ ।
ಪರಮ ಸುಖಕರವೆನಗೆ, ಬಡತನದ ಭಾರವನು ।
ಹರುಷದಲಿ ತಾಳುವೆಂ, ತಾಳಲಾರೆನು ಪರರ ಕೊಡುಗೈಯ ಭಾರವನ್ನು ” ॥೧॥

ಬಡತನದೆ ಬಳಲುವಾತನ ದೈನ್ಯವನು ಕಂಡು ।
ನುಡಿದನೊಬ್ಬನು “ ಸಾಧುವರನೆ ನೀಂ ಬಹುಕಷ್ಟ ।
ಪಡಲೇತಕೀ ನಗರದೊಳಗೊಬ್ಬ ಧನವಂತ ಗುಣವಂತ ಮಾನವಂತ ॥
ಕೊಡುಗೈಯ ದೊರೆಯಿಹನು ನೀನವನ ಬಳಿಗೈದೆ ।
ಕೊಡುವನತ್ಯಾನಂದದಿಂದ ಬಹು ಧನಕನಕ ।
ದುಡುಗೊರೆಯ ಬಡವರಿಗೆ ಬೇಡಿದುದ ಕೊಡುತಿಹನು ನಡೆ ” ಯೆನಲು ನುಡಿದನವನು ॥ ೨ ॥

ತನ್ನ ಬಡತನದ ಬಾಳ್ಕೆಯುನನ್ಯಜನರೊಡನೆ ।
ಬಿನ್ನವಿಪ ಕಷ್ಟದಿಂ ದಾರಿದ್ರ್ಯತಾಪದಲಿ ।
ಬನ್ನಬಡುತಸುವ ಬಿಡುವುದೆ ಲೇಸು ಸುಖಕೆಂದುಯಾಚಿಪರೆ ದೈನ್ಯದಿಂದ ॥
ಅನ್ನಿಗರು ಕೊಟ್ಟ ಪೀತಾಂಬರದ ತೊಡಿಗೆಯಿಂ ।
ತನ್ನ ಕಂತೆಯ ಹೊಲಿದು ಹೊದೆಯುವುದೆ ಸುಖಕರವು ।
ಅನ್ನಿಗನ ಹೆಗಲೇರಿ ನಂದನಕೆ ತೆರಳುವುದು ಬಹುಕಷ್ಟ! ನರಕ ಸುಖವು ॥ ೩ ॥

(೨).

ಉಣ್ಣುವನು ತಡವಾಗಿ ಜಾಣನಾದವನಿಳೆಯೊ ।
ಳುಣ್ಣುವನು ಹಸಿವಿನರ್ಥವ ಸುವ್ರತಾಚಾರಿ ।
ಯುಣ್ಣುವನು ಜೀವನಕ್ಕಾಧಾರಮಪ್ಪಂತೆ ಸಜ್ಜನಂ ತರುಣನರನು ॥
ಉಣ್ಣುವನು ತನಗೊಪ್ಪುವನ್ನವನು ವೃದ್ಧತಾ ।
ನುಣ್ಣುವನು ಸವಿಯಾಗಿ, ಕೂಳಕಾಣದ ಖೋಡಿ ।
ಯುಣ್ಣುವನು ಮೂಗಿನಲಿ ಮೂರಗುಳು ಬೀಳುವಷ್ಟಾಸೆಯಿಂದ ॥ ೪ ॥

ಪರರುಂಬರೆಂಬ ಮತ್ಸರದಿಂದ ತನ್ನಳವ ।
ನರಿಯದುಣ್ಣುವ ನೀಚನನನುದಿನವು ಬಳಲುವನು ।
ಹರಿವುದೋ ಹೊಟ್ಟೆಯೆಂದುಂಡದಿನ ಮರುದಿವಸ ಕೂಳಿರದೆ ಹಸಿವಿನಿಂದ ॥
[ಪರರನ್ನವೆಂದೆಣಿಸಿ ಗಬಗಬನೆ ಕಬಳಿಸಲು ।
ಬರಗೆಟ್ಟ ನರಹಂದಿಯುಂದದಲಿ ಹೊಟ್ಟೆಯು ।
ಬ್ಬರಿಸಿ ಬಿಗಿದಿರೆ ಬಿದ್ದು ಹೊರಳಾಡಿ ವಾಂತಿಮಾಡುವುದಷ್ಟ ದಾರಿದ್ರ್ಯವೈ] ॥೫॥

(೩).

ಮೂಢನನು ಸುಜ್ಞಾನಿ ಜಯಿಸಿದರೆ ಫಲವೇನು? ।
ಮೂಢನಾಜ್ಞಾನಿಯಃನು ಜಯಿಸಲೇನಾಶ್ಚರ್ಯ ।
ಹಾಡುವುದೆ ಕೋಗಿಲೆಯು ಕಾಗೆಯೊಡನಿರ್ದಾಗ ಕಲ್ಲು ರತ್ನವ ಸೀಳದೇ ॥
ಪೀಡಿಸಲು ದುರ್ಜನರು ಸುಜನರ್ಗೆ ಚಿಂತೆಯೇ? ।
ಕಾಡುಗಲ್ ಪೊಂದಳಿಗೆಯನ್ನೊಡೆದ ಮಾತ್ರಕೇಂ ।
ಕಾಡುಗಲ್ಲಿನ ಬೆಲೆಯು ಹೆಚ್ಚುವುದೆ? ಚಿನ್ನವದು ಕೀಳೆನಿಸಿ ಕೆಡುವುದುಂಟೇ ॥೬॥

(ಸ್ಫುಟ.)

ಕರಕರನೆ ಕೊರಳಕೊಯ್ಯುವ ಕಟುಕವೈರಿಯಿಂ ।
ಪರಮಾಪ್ತನೆನಿಸಿ ಬಹು ಸವಿನುಡಿಯು ಮಳೆಗರೆದು ।
ದುರುಳತನದಿಂ ಸ್ವಾರ್ಥವನ್ನೊಳಗೆ ಸಾಧಿಸುವ ಬಂಧುವೇ ತ್ಯಾಜ್ಯನಲ್ತೇ ॥
ಕರುಣೆಯಿಲ್ಲದ ನೀಚನಾದೊಡಂ ತೋರುವನು ।
ಹೊರಗೆ ತನ್ನಾಯುಧವ ವೈರಿ, ಬಹಿರಂಗದಲಿ ।
ಕರುಣಾಳುವೆನಿಪ ಹಿತಶತ್ರುವಿನ ಕಪಟಕೃತಿ ತಿಳಿವುದೇ? ತ್ಯಾಜ್ಯನವನು ॥ ೭ ॥

ಕೃಪಣ.

ಬೀದಿಬೀದಿಗಳಲ್ಲಿ ತಿರುಗಿ ಭಿಕ್ಷೆಯ ಬೇಡು ।
ತ್ತೈದುತಿರೆ ಹೇಮಮಯರಥದೊಳಗೆ ತೆರಳುತಿಹ ।
ಮೇದಿನೀಪತಿಯಂತೆ ದಿವ್ಯವಸ್ತ್ರಾಭರಣಕಾಂತಿಯಿಂದೊಡಗೂಡಿ ಮೆರೆವ ॥
ಮೋದದಾಯಕ ದಿವ್ಯಮೂರ್ತಿಯಂ ಕಾಣಲೆನ ।
ಗಾದ ಪರಮಾನಂದವೇನೆಂದು ಬಣ್ಣಿಸಲಿ ।
ಮಾಧವನ ಮೂರ್ತಿಯೇ ಪ್ರತ್ಯಕ್ಷವಾದಂತೆ ತೋರಿದುದು ಮನಸಿನೊಳಗೆ ॥ ೧ ॥

ಮನೆಯಿಂದ ಬರುವಾಗಲಾವನಿದಿರ್ಗೈದಿದನೊ ।
ಘನಮಹಿಮನನು ಕಂಡೆನಿಂದೆನಗೆ ದಿನದಂತೆ ।
ಮನೆಮನೆಯ ತಿರುಗಿ ಹಿಡಿಹಿಡಿಕಾಳ ಕೂಡಿಸುವ ಸಂಕಟವು ತಪ್ಪಿತಾಹಾ! ॥
ಧನಧಾನ್ಯಗಳ ಸೂರೆಗೈಯುಬಹುದಿವನಾರ್ತ ।
ಜನಕೀತನಂ ಸೇರಿ ಸಂಪದವ ಪಡೆವೆನೆಂ ।
ದೆನುತ ಮನದಲಿ ಮುದದಿ ಯೋಚಿಸುತಲಿರ್ದೆನರಗಳಿಗೆ ನಾನನಿತರೊಳಗೆ ॥ ೨ ॥

ದಿವ್ಯತೇಜಿಗಳು ಮಣಿಹೇಮಮಯರಥವನಾ ।
ದಿವ್ಯಮೂರುತಿಸಹಿತ ತಂದೆನ್ನ ಮುಂದೆ ನಿಲೆ ।
ದಿವ್ಯತೇಜಃಪುಂಜಮೂರ್ತಿಯಂ ಕಂಡೆರಗಿ ವಿನಯಭಯಭಕ್ತಿಯಿಂದ ॥
ಸವ್ಯಸಾಚಿಯ ಮಿತ್ರನನು ನೆನೆಯುತಿರಲವನು ।
ದಿವ್ಯಕರಯುಗಳವನು ಜೋಡಿಸುತ ಪೇಳ್ದನೀ ।
ಭವ್ಯರತ್ನಾಭರಣಸಂಪದಗಳೆನಗೆ ಸೇರಿದುವಲ್ಲ ಭಿಕ್ಷೆಯನು ನೀಡು ದಯದೆ ॥೩॥

ಪರಮಪುರುಷನೆ ನೀನು ಧನಧಾನ್ಯಸಂಪದವ ।
ಕರುಣಿಸುವೆಯೆನಗೆಂದು ಮನದೆ ಭಾವಿಸುತಿರ್ದೆ ।
ನರಿಯೆನ್ನೈ ನಿನ್ನ ಮಾತಿನ ಗೂಢವನು ಮೂಢಮತಿಯೆ ನಾಂ ಕರುಣಿಸೊಲಿದು ॥

ಧರೆಯನಾಳುವ ಚಕ್ರವರ್ತಿಯುಂತೆಸೆವ ನಿನ ।
ಗಿರುವುದೇ ದಾರಿದ್ರ್ಯ ದೌರ್ಭಾಗ್ಯಗಳ ಬಾಧೆ ।
ಯಿರುವುದೇನೀಯೆನ್ನ ಹರಕು ಜೋಳಿಗೆಯೊಳಗೆ ಭಿಕ್ಷೆಯನು ನೀಡೆ ನಿನಗೆ ॥೪॥

ಬಡವನನು ಬೇಡಿ ಕಾಡುವುದಾವನೀತಿಯೈ ।
ಬಡವರೊಡೆಯನೆ ಸಾಗು ಸಾಗಯ್ಯ ಮುಂದಕ್ಕೆ ।
ಕೊಡಲಾರದಿರೆ ಮರಳಿ ಬೇಡಿ ಕಾಡುವ ನಿನ್ನ ಕಪಟವನು ತಿಳಿಯೆನೆಂದು ॥
ನುಡಿದೊಡಂ ನಿಷ್ಠುರದಿ ಬೈದೊಡಂ ದೈನ್ಯವನು ।
ಬಿಡದೆ ಬೇಡಿದನಾತನದ ನೋಡಿ ಬೇಸತ್ತು ।
ಕಡೆಗೆ ಜೋಳಿಗೆಯಲ್ಲಿ ಕೈಯಿಕ್ಕಿ ನೀಡಿದೆನು ನಾಲ್ಕಾರು ಕಾಳುಗಳನು ॥ ೫ ॥

ಪೋಗಿ ಬಹೆನಣ್ಣ ನೀಂ ನೀಡಿದೀ ಕಾಳುಗಳ ।
ನಾಗಶಯನನ ಬಳಿಗೆ ಕೊಂಡೊಯ್ದು ಸಲ್ಲಿಸುವೆ ।
ಪೋಗು ನಿನ್ನಾಲಯಕೆ ಕೊಡಲಾರದನ ಬೇಡಿ ಕಾಡಿದೆಂ ಕ್ಷಮಿಸು ದಯದಿ ॥
ಹೀಗೆಂದು ಸಾರಥಿಗೆ ಸಂಜ್ಞೆಯನು ಮಾಡಿದೊಡೆ ।
ಸಾಗಿದುದು ಮಣಿರಥವು ಬಂದ ದೆಸೆಯಿಂದಲೇ ।
ಪೋಗಿ ಸೇರಿದೆನೆನ್ನ ಗುಡಿಸಲನು ವಿಧ ವಿಧದಿ ಯೋಚಿಸುತ ಗೂಢಕೃತಿಯ ॥೬॥

ಸಾರೆ ದಿನಮಣಿ ಪಶ್ಚಿಮಾಂಬುಧಿಯ ಮೇರೆಯುಂ ।
ಸಾರೆ ಖಗಮೃಗ ತಮ್ಮ ತಮ್ಮಾಲಯಂಗಳನು ।
ತಾರಕಾಪತಿ ಮೂಡಣಾಗಸದ ಶಿಖರದೊಳ್ ಮೆಲ್ಲನಡಿಯಿಡುತ ಬರಲು ॥
ವೈರಿನೃಪನಂ ಕ್ರೂರಕರದಿಂದ ಕೊರಗಿಸಿದ ।
ವೀರನನುಚರರನಲ್ಲಿರಹೇಳಿ ಮರಳಿದೊಡ ।
ನೇರಿಬಹ ನೃಪನಂತೆ ತೋರಿದಂ ಸೃಷ್ಟಿಯೊಳ್ ಸ್ಥಿರವಾದ ಶಾಂತಿಯುಂಟೇ ॥೭॥

ಮುರುಕು ಗುಡಿಸಲು ಸೇರಿ ಪಣತೆಯಲಿ ಬತ್ತಿಯನು ।
ಸರಿಮಾಡಿ ತಿರಿದು ತಂದಕ್ಕಿಯನು ಗಡಿಗೆಯಲಿ ।
ಸುರಿವಾಗ ಕಂಡೆನಾಂ ಮಿನುಗುತಿಹ ನಾಲ್ಕಾರು ಬಂಗಾರದಕ್ಕಿಗಳನು ॥
ಹರಿಯೆ ಬೇಡಲು ಕೊಡಲು ಮನವೊಲಿಯದಾಯ್ತೆನಗೆ ।
ಅರಿಯನೈ **ಕೊಟ್ಟು ಪಡೆ**ಯೆಂಬುದನು ಭವಕೆ ನಾಂ ।
ಬರುವಾಗ ಕೊಟು ಬಂದಿರಲಿಲ್ಲ, ಬಂದೀಗ ಕೊಡಲಿಲ್ಲ, **ಕೃಪಣ**ನಾನೈ ॥ ೮ ॥

ವಿಚಾರತರಂಗ.

೧. ಕರ್ತವ್ಯವಿಚಾರ.

ಜನರ ನುತಿಯನು ಬಯಸಿಯುರಿಯುಲಿ ।
ತನುವನೀಡಾಡಿದೊಡೆ ನಿನ್ನಯ ।
ಮನದ ಸಾಧನೆ ಸಾಧ್ಯವಪ್ಪುದೆ? ಮೂಢಮಾನವನೇ ॥
ಮನುಜನಾತನ ಮನಕೆ ಮೆಚ್ಚುವ ।
ತನಗೆ ಹಿತಕರವೆನಿಪ ಕಾರ್ಯದಿ ।
ನಿನಗೆ ಮನವೊಲಿವಂತೆ ನುತಿಪನು ತಿಳಿದು ನಡೆಯಿದನು ॥ ೧ ॥

ಜಗದೊಡೆಯನಿತ್ತಿರುವ ಬುದ್ಧಿಯ ।
ಜಗಕೆ ತೋರುತ ಶುದ್ಧಮನದಲಿ ।
ಜಗದ ಹಿತಸಾಧನೆಯೆ ನಿನ್ನಯ ಬಯಕೆಯಾಗಿರಲಿ ॥
ಜಗದ ಜನರನು ತೃಪ್ತಿಗೊಳಿಪುದು ।
ಜಗದ ಪಾಲಕಗಾಯ್ತುಸಾಧ್ಯವು ।
ಜಗದ ಜನರಾ ಸ್ವಾರ್ಥ-ಸಾಗರವೀಸಲಸದಳವು ॥ ೨ ॥

ಸಾಗರದಿ ಜಲರಾಶಿಯಿಃರಲೇಂ? ।
ಹೋಗಿತುಂಬುವ ಕೊಡಕೆಯನುಗುಣ ।
ವಾಗಿ ಜಲವದರಲ್ಲಿ ಬರುವುದು ಹೆಚ್ಚು ಬಹುದೇನು ॥
ಹೀಗೆಯೇ ನಿನ್ನುಚ್ಚಗುಣಗಳಿ ।
ಗಾಗಿ ಲೋಕದ ಜನರ ಭಾವನೆ ।
ಯಾಗುವುದು ನೋಡುವರ ದೃಷ್ಟಿಯ ಶಕ್ತಿಯಿದ್ದಂತೆ ॥ ೩ ॥

ಧರ್ಮಸತ್ಯಾಚರಣೆಗಳ ನಿಜ ।
ಮರ್ಮವೆಲ್ಲರುಮೆಲ್ಲಿಬಲ್ಲರು ।
ಕರ್ಮವೇ ಧರ್ಮಕ್ಕೆ ಸತ್ಯಕೆ ಸಾಕ್ಷಿಯಾಜನರ ॥

೨ ವ್ಯವಹಾರವಿಚಾರ.

ನಾಡಿನಲಿ ನೂರೆಂಟು ಜನರೊಡ ।
ನಾಡಿ ಬಾಳುವೆ ಮಾಳ್ಪುದಾದೊಡೆ ।
ನೋಡಿಕೊಳ್ ವ್ಯವಹಾರಜಾಣ್ಮೆಯ ಗೂಢತತ್ವಗಳ ॥
ಮಾಡಲಾಗದು ದುಷ್ಟಕೃತ್ಯವ ।
ನಾಡಲಾಗದು ದುಷ್ಟವಚನವ ।
ನೋಡಿ ತಿಳಿದಿರಬೇಕು ದುಷ್ಕೃತಿ ದುಷ್ಟವಚನಗಳ ॥ ೧ ॥

ದುಷ್ಟರಾಡುವ ಧರ್ಮವಚನವು ।
ದುಷ್ಟಸರ್ಪದ ಹೆಡೆಯ ರತ್ನವು ।
ಶಿಷ್ಟರಾದವರದಕೆ ಮೋಹಿಸಲಾಗದೆಂದೆಂದು ॥
ಶಿಷ್ಟರನು ನೆರೆ ಮೋಸಗೊಳಿಸುತ ।
ದುಷ್ಟಕೃತ್ಯಗಳನ್ನು ಮುಚ್ಚಲು ।
ದುಷ್ಟರಾದವರಾಡುತಿರುವರು ನೀತಿವಚನಗಳ ॥ ೨ ॥

ಸೂರೆಗೈ ಸವಿಮಾತಿನಮೃತವ ।
ಸಾರುತಿರು ಸಜ್ಜನರ ಕೀರ್ತಿಯ ।
ತೋರು ಸದ್ಗುಣಗಣವ ಲೋಕಕೆ ನಿನ್ನ ನಡತೆಯಲಿ ॥
ಆರೊಳಾಗಲಿ ನಿನ್ನ ಗುಟ್ಟನು ।
ತೋರಿ ಮೈಮರೆತಿರಲು ಸಲ್ಲದು ।
ಸೇರದಿರ್ವ್ಯವಹಾರಚತುರರ ನೆರೆಯನೆಂದೆಂದು ॥ ೩ ॥

ನೀಚಕೃತ್ಯವ ಮಾಡಲೆಳಸದೆ ।
ನೀಚಮಾರ್ಗವ ನೋಡಿ ತಿಳಿದಿರೆ ।
ನೀಚರನು ಪ್ರತಿಬಂಧಿಸಲು ಬಹು ಸುಲಭವಾಗುವುದು ॥
ನೀಚಭಾವನೆಯಿಂದ ನಿಂದಿಪ ।
ನೀಚಜನರಾ ನೀಚವಚನವು ।
ನೀಚ ನಾಯಿಯ ದನಿಗೆ ಸಮವೆಂದೆಣಿಸಿ ನಡೆ ಜಗದೆ ॥ ೪ ॥

ಮಾತೃಭೂಮಿ.

ಮಾನದಪಮಾನದಲಿ ಪತನೋ ।
ತ್ಥಾನ ಸುಖದುಃಖಗಳ ಸಮಯದಿ ।
ಮಾನುಷತ್ವವ ಕಾಯ್ದುಕೊಳ್ಳಲು ಶಕ್ತಿಯನ್ನಿತ್ತು ॥
ನೀನೆ ಕಾಯ್ವುದು ಪುತ್ರವತ್ಸಲೆ ।
ಧ್ಯಾನಿಪೆಂ ಸ್ನೇಹಾರ್ತ ಜನನಿಯೆ ।
ಮಾನವತಿ ಕರ್ಣಾಟಮಾತೆಯೆ ನಿನ್ನ ಬಾಲಕರ ॥ ೧ ॥

ಮನದ ಮೋಹದಿ ಮುದ್ದುಗುವರರ ।
ಮನೆಯೊಳಿಟ್ಟಾಡಿಸುತ ನಲಿಯದೆ ।
ತನತನಗೆ ತಕ್ಕಂತೆ ಮಾನ್ಯತೆವಡೆಯೆ ಜಗದೊಳಗೆ ॥
ಅನುವದೀಯೌ, ನಿನ್ನ ಸಂತತಿ ।
ಯನುದಿನವು ಬಾಲ್ಯದಲೆ ಬಾಳದೆ ।
ಜನತೆಯೊಳ್ ನಿಜಬಾಳ್ಕೆಗುಚಿತಸ್ಥಳವ ಶೋಧಿಸಲಿ ॥ ೨ ॥

ಅಡಿಗಡಿಗೆ ಬಹ ವಿಘ್ನಸಂತತಿ ।
ತಡೆದುನಿಲ್ಲಿಸಿ ನಿನ್ನ ಬಾಲರ ।
ನಿಡಲು ಕೊಡದಿರು ಮೂಢಭಾವದಿ, ಕಷ್ಟಗಳ ಸಹಿಸಿ ॥
ನಡೆದು ಜೀವದ ಮೂಢಮೋಹವ ।
ಬಿಡುತಲಿಷ್ಟಾನಿಷ್ಟ ಕಾರ್ಯಗ ।
ಳೊಡನೆ ಧೈರ್ಯದಿ ಕಾದಿ ಜೀವನಕಲಹವನು ಗೆಲಲಿ ॥ ೩ ॥

ಕೋಟಿಜನತೆಯ ಜನನಿ ಮಾನವ ।
ಕೋಟಿಯಲಿ ನಿನ್ನಣುಗರನು ಹುಲು ।
ಕೀಟಗಳ ಪರಿ ಜನನ-ಜೀವನ-ಮರಣಯಾತ್ರೆಗಳ ॥
ನಾಟಕದಿ ಕುಣಿಸಾಡಿ ಬಿಸುಡದೆ ।
ಕೋಟಿ ವೀರರ ಜನನಿಯೆನಿಸಾ ।
ಕೋಟಿ ಕನ್ನಡಿಗರಿಗೆ ಪಾಲಿಸು ಮಾನುಷತ್ವವನು ॥ ೪ ॥

ಭಕ್ತನ ಬಿನ್ನಹ.

ಸಕಲ ಸಂಪದವಿತ್ತೆ ಪಾಪಿಗೆ ।
ಸಕಲರಲಿ ಸಲೆ ಮಾನ್ಯನೆನಿಸಿದೆ ।
ಅಕಟ ದಯಮಾಡಿಲ್ಲವೆಂತೈ ಸುಖದ ಲೇಶವನು ॥
ನಕಲನುರೆ ತೋರಿಸಿದೆ ಲೋಕಕೆ ।
ಸುಖದ ಸಾಗರವೆನ್ನ ಮನವೆನೆ ।
ಅಕಟ! ಅಸಲೀವಾಗ ದುಃಖದ ಮೊಟ್ಟೆಯನು ಕೊಟ್ಟೆ ॥ ೧ ॥

ಹೊರಗೆ ಜನರಿಗೆ ತೋರಿಯೊಂದನು ।
ಮರೆಯೊಳೊಂದನು ಕೊಟ್ಟ ನಿನ್ನನು ।
ಧರೆಯ ಪಾಲಕನೆನುತ ನುತಿಸುವರೇಕೆ ಶ್ರೀಹರಿಯೆ ॥
ನರರು ನಿಶ್ಚಯ ಮೂಢರಹುದೈ ।
ಅರಿಯದೆಯೆ ನೆರೆ ಮೋಸಪೋಪರು ।
ಇರದು ಸುಖವೆಳ್ಳನಿತುಮೆಂಬುದು ನಿಜವು ಭವದೊಳಗೆ ॥ ೨ ॥

ಗಾರುಡಿಗನುರೆ ಮೋಸಮಾಡುತ ।
ತೋರಿ ರೂಪಾಯಿಗಳ ಜನರಿಗೆ ।
ಆರರಿಯದಂದದಲಿ ಮುಷ್ಟಿಯ ಮುಚ್ಚಿ ಮರಿಹಾವ ॥
ದೂರದಲಿ ಕೈನೀಡಿ ಚೆಲ್ಲಲು (ಹಾಕಲು) ।
ಚೀರಿ ವಿಸ್ಮೃತಿವಡೆವ ಬಾಲನ ।
ನೂರುಮಡಿ ಮರೆಮೋಸವಾಯ್ತೆನಗೀ ಪ್ರಪಂಚದಲಿ ॥ ೩ ॥

ನೀವು ಪೇಳುವಿರಾನು ನಿಜಸುಖಿ ।
ಯಾವುದಕ್ಕೂ ಕೊರತೆಯಿಲ್ಲವು ।
ಪಾವನರೆ ಗೈವೆಂ ಪ್ರತಿಜ್ಞೆಯ ನಂಬಿರೀನುಡಿಯ ॥

ಈ ವಸುಧೆಯೊಳಗಾನು ಜನ್ಮಿಸಿ ।
ಈವರೆಗೆ ಕಂಡಿಲ್ಲ ಸೌಖ್ಯವ ।
ದೇವ! ಮುಂದೇನಿರ್ಪುದೋ ನಾನರಿಯೆ ನಿಜವನ್ನು ॥ ೪ ॥

ಮುಂದೆ ಸುಖವಹುದೆಂಬ ಪಿರಿದೆನಿ ।
ಪೊಂದು ಮೋಹಕ ಭಾವವೇ ನಮ ।
ಗಿಂದು ಕಾರ್ಯಾಸಕ್ತಿಯೀಯುತಲೆಳೆದುಕೊಂಡೊಯ್ವು ॥
ಮುಂದೆ ಸುಖವಿದೆ ಮುಂದೆ ಸುಖವಿದೆ ।
ಯೆಂದು ಕಿವಿಗಿನಿದುಸಿರಿ ಕೊನೆಯಲಿ ।
ಕೊಂದು ಮಣ್ಣಿನ ದೇಹವನು ಮಣ್ಣಿಗೆಯೆ ಕೂಡಿಪುದು ॥ ೫ ॥

ಸುತರು ಸತಿ ಹಿತಬಾಂಧವರು ನಿಜ ।
ಹಿತದ ಸಾಧನವಲ್ಲ ಲೋಕದೊ ।
ಳತುಲಸಂಪದ ಸುಖಕೆ ಕಾರಣವಲ್ಲ ಬಾಂಧವರೇ ॥
ಹಿತದ ಸಾಧನೆಗೊಂದೆ ಮಾರ್ಗವ ।
ದತಿ ಸುಗಮವಾಗಿಹುದು; ಶಾಂತಿಯೆ ।
ಅತುಲಸುಖಕರ ಶೋಕಸಂತಾಪಾಪಹಾರಿಯದು ॥ ೬ ॥

ಸುಖದ ಸಾಗರವೆಂದು ತಿಳಿಯುವ ।
ಸುಖದ ಸಂಸಾರದಲಿ ನಮ್ಮಯ ।
ಸುಖದ ಹೆಸರಿನ ದುಃಖ ತುಂಬಿದೆ ನಂಬಿ ಬಾಂಧವರೇ ॥
ಸುಖದ ಭಾವನೆಯಿಂದ ಕೀಟವು ।
ಸುಖವ ಪಡೆವುದು ನೋಡಿ ದೀಪವ ।
ಸಖರೆ ನಿಜಸುಖವಿಲ್ಲ ಸಾರುವೆನೀ ಪ್ರಪಂಚದಲಿ ॥ ೭ ॥

ಸೃಷ್ಟಿಕರ್ತನು ಸೃಷ್ಟಿಕಾರ್ಯದೊ ।
ಳೆಷ್ಟು ಮೋಸವ ಮಾಡಿಹನೊ ತಾಂ ।
ಕಷ್ಟವೇ ಸುಖವೆಂಬ ಭಾವವ ನಂಬಿ ನಡೆವಂತೆ ॥

ಇಷ್ಟಸಾಧನೆಯೆಂಬ ಮೃಗಜಲ। (ಮರೀಚಿಕೆ)
ವೆಷ್ಟು ಕಣ್ಣಿಗೆ ರಮ್ಯವೆನಿಪುದೊ।
ಅಷ್ಟುಮಂತ್ಯದೆ ಕಷ್ಟವಪ್ಪುದು ನಂಬಿ ಬಾಂಧವರೇ ॥ ೮ ॥

ದೇಹಗೇಹದ ಪಂಚಮಾರ್ಗದಿ।
ಮೋಹಮದ ಮೊದಲಾದ ರಿಪುಗಳು।
ಸಾಹಸದೊಳೊಳಸೇರಿ ಸತ್ವವ ಸೂರೆಗೊಳ್ಳುವರು ॥
ಈಹದನವರಿತೆಲವೊ ಸುಜನನೆ।
ಕಾಹಿನಲಿ ಸುವಿವೇಕಶೂರನ।
ದೇಹಗೇಹವನಿರಿಸಿ ಸತ್ವವ ಕಾಯ್ದುಕೊಳ್ಳುವುದು ॥ ೯ ॥

ಮನವು ಮರ್ಕಟನಂತೆ ಸಂಸೃತಿ।
ವನದಿ ವಿಹರಿಸುವಾಗಲಿಂದ್ರಿಯ।
ಜನಿತ ಸುಖಸಂಪದವೆ ನಿಜಸುಖವೆಂದು ಮೋಹಿಸದೆ ॥
ಘನ ವಿವೇಕದ ಬಂಧನದೊಳಾ।
ಮನವನಿರಿಸುತ ಹರಿಯಚರಣವ।
ನೆನೆಯುತನುದಿನವೆಸಗುತಿರುವುದು ಸ್ತುತ್ಯಕೃತ್ಯಗಳ ॥ ೧೦ ॥

ಮರೆಯಲಾರದು ಮನವು ಮೋಹವ।
ತೊರೆಯಲಾರದು ತನುವು (ಕುತನು) ಬಾಹ್ಯದ।
ಬರಿಯ ಬಯಕೆಯ, ಕಾಯಲಾರೆನು ಪಂಚಮಾರ್ಗದಲಿ ॥
ಹರಿವ ಮರ್ಕಟಮನವ, ಬಂಧಿಸ।
ಲರಿಯೆನೈ ರಿಪುವರ್ಗವನು ನೀಂ।
ಕರುಣಿಸೈ ಶ್ರೀಹರಿಯೆ ಭಕ್ತನ ಕೊನೆಯ ಬಿನ್ನಹವ ॥ ೧೧ ॥

“ ಹರಿಯೆ ನಿನ್ನೊಳು ಭಕ್ತಿಮುಕ್ತಿಗೆ।
ಸರಳಮಾರ್ಗವಿದೆಂಬುದರಿಯದೆ।
ತಿರುತಿರುಗಿ ಮಾಯಾಪ್ರಪಂಚದಿ ಸುತ್ತಿಬೇಸತ್ತೆ ॥
ಪರಮಭಕ್ತಿಯೊಳೀಗ ನಿನ್ನಯ।
ಚರಣತಲದಲಿ ಬಿದ್ದು ಬೇಡುವೆ।
ಪರಿಹರಿಸೊ ನರಜನ್ಮವನು ಕೊಂಡೀ ಸುಮಾಂಜಲಿಯ ” ॥ ೧೨ ॥

ಕರ್ಣಾಟಕ ಕವಿಮಂಡಲ.

ನಂ	ಕ. ಹೆಸರು	ಸ್ಥಳ.	ಕಾಲ.	ಕುಲ ಮತ್ತು ಕಾವ್ಯಗಳು.
೧	ನೃಪತುಂಗ.	ಮಾನ್ಯಖೇಟ	ಸು. ೮೫೦	ಜೈನ, ಕವಿರಾಜಮಾರ್ಗ.
೨	ಆದಿಪಂಪ.	ವೆಂಗಿಪಳು	೯೦೦	,, ಭಾರತ, ಆದಿಪುರಾಣ
೩	ಪೊನ್ನ.	...	೯೫೦	,, ಶಾಂತಿಪುರಾಣ, ಜಿನಾಕ್ಷರಮಾಲ ಭುವನೈಕರಾಮಾಭ್ಯುದಯ.
೪	ರನ್ನ.	ಮುದುವೊಳಲು	೯೪೯	,, ಗದಾಯುದ್ಧ, ಅಜಿತಪುರಾಣ
೫	ನಾಗವರ್ಮ 1.	ವೆಂಗಿಪಳು	೯೯೦	,, ಕಾದಂಬರಿ, ಛಂದೋಂಬುಧಿ.
೬	ಚಾವುಂಡರಾಯ	...	೯೭೮	,, ಚಾವುಂಡರಾಯಪುರಾಣ (ಗದ್ಯ
೭	ಅಭಿನವಪಂಪ.	ವಿಜಯಪುರ	೧೧೦೫	,, ರಾಮಾಯಣ, ಮಲ್ಲಿನಾಥಪುರಾಣ
೮	ನಯಸೇನ.	ಮುಳಗುಂದ	೧೧೧೨	,, ಧರ್ಮಾಮೃತ.
೯	ರಾಜಾದಿತ್ಯ.	ಪೂವಿನಬಾಗೆ	೧೧೨೦	,, ಗಣಿತಶಾಸ್ತ್ರದ ೬ ಕಾವ್ಯಗಳು.
೧೦	ದುರ್ಗಸಿಂಹ.	ಸಯ್ಯಡಿ	೧೧೪೫	ಬ್ರಾಹ್ಮಣ. ಪಂಚತಂತ್ರ.
೧೧	ಬಸವ.	ಕಲ್ಯಾಣ	೧೧೬೦	ವೀರಶೈವ ೩ ಧಾರ್ಮಿಕವಚನಗಳು.
೧೨	ಚೆನ್ನಬಸವ.	ಕಲ್ಯಾಣ	೧೧೬೦	,, ಆರು ಧಾರ್ಮಿಕ ವಚನಗಳು.
೧೩	ನಾಗವರ್ಮ 2.	...	೧೧೬೫	ಜೈನ. ಕಾವ್ಯಾವಲೋಕನ, ಭಾಷಾಭೂ ಷಣ, ವಸ್ತುಕೋಶ.
೧೪	ರಾಘವಾಂಕ.	ಹಂಪೆ	೧೧೬೫	ವೀರಶೈವ. ಸೋಮನಾಥಚರಿತ್ರೆ, ಸಿದ್ಧ ರಾಮಪುರಾಣ, ಹರಿಶ್ಚಂದ್ರಕಾವ್ಯ
೧೫	ಹರಿಹರ.	ಹಂಪೆ	೧೧೬೫	ವೀ. ಪಂಪಾಶತಕ, ಶಿವಗಣದರಗಳೆ, ಗಿರಿಜಾಕಲ್ಯಾಣ
೧೬	ನೇಮಿಚಂದ್ರ.	...	೧೧೭೦	ಜೈನ. ಲೀಲಾವತಿ ನೇಮಿನಾಥಪುರಾಣ.
೧೭	ರುದ್ರಭಟ್ಟ	...	೧೧೮೦	ಬ್ರಾ. ಜಗನ್ನಾಥವಿಜಯ, ರಸಕಲಿಕೆ.
೧೮	ಕೇಶಿರಾಜ.	...	೧೨೬೦	ಜೈನ ಶಬ್ದಮಣಿದರ್ಪಣ.
೧೯	ಆಂಡಯ್ಯ	...	೧೨೩೫	ಜೈನ. ಕಬ್ಬಿಗರಕಾವ.
೨೦	ಕುಮಾರವ್ಯಾಸ.	ಗದಗು	೧೪೪೦	ಬ್ರಾಹ್ಮಣ. ಭಾರತ.
೨೧	,, ವಾಲ್ಮೀಕಿ.	ತೊರವೆ	೧೫೦೦	ಬ್ರಾಹ್ಮಣ. ತೊರವೆರಾಮಾಯಣ.
೨೨	ಪುರಂದರದಾಸ.	ಪುರಂದರಗಡ	೧೫೫೦	ಬ್ರಾಹ್ಮಣ. ಕೀರ್ತನೆಗಳು.
೨೩	ಕನಕದಾಸ.	ಕಾಗಿನೆಲೆ	೧೫೫೦	ಬೇಡ. ನಳಚರಿತೆ, ಹರಿಭಕ್ತಿಸಾರ, ರಾಮಧಾನ್ಯಚರಿತ್ರೆ.
೨೪	ಭಟ್ಟಾಕಳಂಕ	ಹಾಲುವಳ್ಳಿ	೧೬೦೪	ಜೈನ. ಶಬ್ದಾನುಶಾಸನ.
೨೫	ಷಡಕ್ಷರದೇವ.	ಯಳಂದೂರು	೧೬೫೦	ವೀ. ರಾಜಶೇಖರವಿಳಾಸ, ಶಬರಶಂಕರ ವಿಳಾಸ ವೃಷಭೇಂದ್ರವಿಜಯ.
೨೬	ಲಕ್ಷ್ಮೀಶ.	ದೇವಪುರ (?)	೧೪೧೫ (?)	ಬ್ರಾಹ್ಮಣ. ಜೈಮಿನಿಭಾರತ
೨೭	ಬಸವಪ್ಪಶಾಸ್ತ್ರಿ.	ಮೈಸೂರು	೧೮೫೦	ವೀರಶೈವ. ಶಾಕುಂತಲಾದಿಗಳು.

ವಿ. ಸೂ.:—೧, ೨, ೪, ೨೧ನೇ ಕವಿಗಳ ಕಾಲವು ಕ್ರಮವಾಗಿ ೮೧೯, ೯೪೧, ೯೯೩, ೧೫೯೦ ಎಂದೂ ಪಂಡಿತರು ಅಭಿಪ್ರಾಯಪಡುವರು ಅಭಿನವಪಂಪ (ನಾಗಚಂದ್ರ) ನ ಸ್ಥಳವು ವಿಜಯಪುರವೆಂದರೆ ಈಗಿನ ವಿಜಾಪುರವಾಗಿರದೆ ಆತನು ಬಲ್ಲಾಳರಾಜನ ಆಸ್ಥಾನಪಂಡಿತನಾಗಿದ್ದಂತೆ ಆಧಾರಗಳು ದೊರೆತಿವೆ. ಕಾದಂಬರಿ ಛಂದೋಂಬುಧಿಗಳೆರಡನ್ನೂ ಒಬ್ಬನೇ ನಾಗವರ್ಮನು ಬರೆದಿಲ್ಲವಾಗಿಯೂ ಸಾಧಿಸುವದುಂಟು.

ಹೃದಯನಿವೇದನೆ.

ರ್ಯರೆ,

ಜಗನ್ನಿಯಂತನಾದ ಭಗವಂತನ ಕರುಣೆಯಿಂದಲೇ ಈ ನಮ್ಮ ಗ್ರಂಥ ಾಲೆಯ ಏಳನೆಯ ಕುಸುಮವನ್ನು ತಮ್ಮ ಸನ್ನಿಧಿಯಲ್ಲಿ ಅರ್ಪಿಸುವ ಆನಂದದ ಮಯವು ಒದಗಿರುವುದು. ಸೃಷ್ಟಿಯ ನಿಯಮಾನುಸಾರವಾಗಿ ಒದಗಿ ಬಂದಿ ುವ ದೇಶದ ದುಃಖದಾಯಕವಾದ ಚಂಚಲ ಪರಿಸ್ಥಿತಿಯಲ್ಲಿ ಕನ್ನಡಿಗರೆಲ್ಲರೂ ಂದಿಲ್ಲೊಂದು ಭಾವನಾಪ್ರವಾಹದಲ್ಲಿ ಸಿಲುಕಿಕೊಂಡು ತೊಳಲುತ್ತಿರಲು, ುಂಬಾ ಶಾಂತತೆಯ ಕಾಲದಲ್ಲಿಯೇ ಅಷ್ಟೊಂದು ಆಸ್ತಿಕ ಭಾವನೆಯಿಲ್ಲದ ಜನತೆ ುಂದ ನಮ್ಮಂಥ ದೀನ ಭಾಷಾಸೇವಕರಿಗೆ ತಕ್ಕ ಪ್ರೋತ್ಸಾಹನವು ಹ್ಯಾಗೆ ೂರೆಯಬೇಕು? ಆದ್ದರಿಂದ ನಮ್ಮ ಗ್ರಂಥಮಾಲೆಯ ಕಾರ್ಯಕ್ರಮವು ವಿಘ್ನ ರಂಪರಗಳಿಗೆ ಒಳಗಾದದ್ದು ಆಶ್ಚರ್ಯದ ಮಾತಲ್ಲ; ಆದರೂ ಕರ್ಣಾಟಕದ ೇರೆ ಬೇರೆ ಭಾಗಗಳ ಭಾಷಾಭಿಮಾನಿಗಳ ಎಡರಿಲ್ಲದ ಪ್ರೋತ್ಸಾಹನದಿಂದಲೇ ಾವು ಧೈರ್ಯವನ್ನವಲಂಬಿಸಿ ಕಾರ್ಯವನ್ನು ಪುನಃ ಕೈಕೊಂಡೆವು. ಹೀಗೆಯೇ ಘ್ನಪರಂಪರೆಯ ಆಘಾತಗಳು ಬಂದರೂ ಶಕ್ತಿಯನ್ನು ಮೀರಿ ಭಾಷಾಮಾತೆಯ ೇವೆಯನ್ನು ಕೈಕೊಳ್ಳಬೇಕೆಂದು ಆಶಿಸುವೆವು. ಸರ್ವ ಶಕ್ತಿಮಾನ್ ಭಗವಂತನು ನುಗ್ರಹಿಸಲಿ.

ಇಲ್ಲಿ ವಿಜ್ಞಾಪಿಸಿಕೊಳ್ಳಬೇಕಾದ ಇನ್ನೊಂದು ಸಂಗತಿಯೇನೆಂದರೆ, ಈ ್ರಂಥದಲ್ಲಿ ಅನ್ಯಕವಿಗಳ ಭಾವನೆಗಳನ್ನು ಆಯ್ದುಕೊಂಡಿರುವ ಎಲ್ಲ ಪ್ರಸಂಗಗ ಲ್ಲಿಯೂ ಭಾವನಾವೈಚಿತ್ರ್ಯದಿಂದ ಕಂಡುಬರುವ ಗುಣಕ್ಕೆ ಮೂಲಕವಿಗಳೇ ಾಘ್ಯರೆಂದೂ ಭಾಷಾವೈಚಿತ್ರ್ಯವೇ ಮೊದಲಾದ ದೋಷಗಳೇನಾದರೂ ತೋರಿ ದರೆ ನಾನೇ ಅಶ್ಲಾಘ್ಯನಲ್ಲದೆ ಮೂಲಕವಿಗಳು ಆ ಭಾಗದಲ್ಲಿಯೂ ತುಂಬಾ ೂಜ್ಯರೇ ಎಂದೂ ಭಾವಿಸಿರುವೆನು.

ಮನಸ್ಸಿನ ನಿರ್ಮಲವೂ ನಿಷ್ಕಾಮವೂ ಆದ ಭಕ್ತಿಭಾವನೆಯಿಂದ ಪದತ ದಲ್ಲಿ ಅರ್ಪಿಸಿದ ಈ ನನ್ನ ಅಲ್ಪಕೃತಿಯನ್ನು ತಮ್ಮ ವಿದ್ಯಾರ್ಥಿಯ ಕೃತಿಯೆಂಬ ವಾತ್ಸಲ್ಯದಿಂದ ಪ್ರೇರಿತರಾಗಿ ಪ್ರೇಮಪೂರ್ವಕವಾಗಿ ಸ್ವೀಕರಿಸಿದ ನನ್ನ ಗುರು ಪುಂಗವರಾದ **ಶ್ರೀ. ಪದ್ಮನಾಭರಾವ್ ಚಂದಾವರಕರ** ಬಿ. ಎ. ಎಜ್ಯು ಕೇಶನಲ್ ಇ. ದ. ಭಾ. ಅವರ ಉಪಕಾರವನ್ನು ಸ್ಮರಿಸುವುದು ನನ್ನ ಕರ್ತವ್ಯವು.

ಗ್ರಂಥಮಾಲೆಯ ಎಂಟನೆಯ ಪುಷ್ಪವಾದ **ಭೀಷ್ಮವಿಜಯವು** ತಿಂಗ ಳೊಪ್ಪತ್ತಿನಲ್ಲಿಯೇ ಪ್ರಕಟವಾಗುವುದು. ಭಾಷಾಭಿಮಾನಿಗಳು ಪ್ರೋತ್ಸಾಹಿಸಲಿ.

ಶ್ರೀಸರಸ್ವತೀಮಂದಿರಮ್. ಧಾರವಾಡ. | **ಸದಾ ಸುಜನ ಪಾದಾವನತ,** **ನಾರಾಯಣ.**

ಕರ್ಣಾಟಕ ಘೋಷಯಾತ್ರೆ.

ಇದೊಂದು ಮನೋಹರವಾದ ರೂಪಕವು; ಮೂಲಗ್ರಂಥವನ್ನು ಮಹಾ ಮಹೋಪಾಧ್ಯಾಯ ಬ್ರಹ್ಮಶ್ರೀ ಲಕ್ಷ್ಮಣ ಸೂರಿಗಳವರು ಗೀರ್ವಾಣಭಾಷೆಯಲ್ಲಿ ಬರೆದರು. ಅದನ್ನು **ಶ್ರೀ. ಬಿ. ರಾಮರಾವ್,** ಎಮ್. ಎ. ಎಲ್ ಎಲ್. ಬಿ. ಅವರು ಕನ್ನಡಿಸಿರುವರು. ಧರ್ಮರಾಜನ ಕ್ಷಮಾಗುಣದ ಅತ್ಯುಚ್ಚ ಸ್ವರೂ ಪವನ್ನು ವ್ಯಕ್ತಪಡಿಸುವ ಪೌರಾಣಿಕ ಕಥಾಪ್ರಸಂಗವನ್ನು ಭರತಶಾಸ್ತ್ರಪಾರಂಗ ತರೂ ನಿರರ್ಗಳ-ಕವಿತಾಶಕ್ತಿಯುತರೂ ಆದ ಕವಿಗಳು ಮೂಲದಲ್ಲಿ ಮನೋಹ ರವಾಗಿ ಚಿತ್ರಿಸಿರುವಂತೆ, ಈ ಕಾವ್ಯದಲ್ಲಿ ಅದರ ಕರ್ಣಾಟಕ ಗದ್ಯಾನುವಾದವು ಅಷ್ಟೇ ಮನೋರಮವಾಗಿ ಪ್ರತಿರೂಪಿತವಾಗಿದೆ. ಗ್ರಂಥವು ಅನುಕರಣೀಯ ವಾದ ಸುನೀತಿ ಪ್ರತಿಪಾದಕವಾಗಿರುವಂತೆ ಅದರ ಉತ್ಕೃಷ್ಟವಾದ ಕನ್ನಡದ ಶೈಲಿಯು ನೂತನ ಲೇಖಕವರ್ಗಕ್ಕೆ ಮೇಲ್ಪಂತಿಯಂತಿರುವುದು. ಗ್ರಂಥದ ಬಾಹ್ಯಾಂಗವು ಕೂಡ ಮೋಹಕವಾಗಿರುವುದು. ಕರ್ಣಾಟಕ ಭಾಷಾಭಿಮಾನಿ ಗಳ ಪ್ರೋತ್ಸಾಹನದಿಂದ ಕರ್ತರು ಇನ್ನೂ ಇಂಥ ಅನೇಕ ಗ್ರಂಥಗಳನ್ನು ರಚಿಸಿ ಪ್ರಕಟಿಸಲೆಂದು ಕೋರುವೆವು.

ಗ್ರಂಥದ ಬೆಲೆ ೭ ಆಣೆ. ಮದ್ರಾಸದ (ವ್ಹೆಪೆರಿ) **ಬಿ. ಎಮ್. ನಾಥ** ಕಂಪನಿಯವರಿಂದ ಪುಸ್ತಕಗಳನ್ನು ಪಡೆಯಬಹುದು. **—ಸಂಪಾದಕ.**

